₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಬುಧವಾರ 25.09.2024 ಸಂಪುಟ: 67 ಸಂಚಿಕೆ: 140 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ಯಾರಾದರೂ ನಮ್ಮನ್ನು ಬಳಸಿಕೊಂಡರೆ, ಉಪಯೋಗಿಸಿಕೊಂಡು ಮರೆತರೆ ಅಂಥವರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬಾರದು. ಆದರೆ ನಮ್ಮ ಬೆಳವಣಿಗೆಯಲ್ಲಿ ಸಹಕರಿಸಿದವರನ್ನು, ಕಾರಣ ರಾದವರನ್ನು ಮಾತ್ರ ಎಂದೂ ಮರೆಯಬಾರದು.

ವಕ್ರತುಂಡೋಕ್ತಿ

ಸಂತಸವನ್ನು ಖರೀದಿಸುವುದು ಸಾಧ್ಯವಿಲ್ಲ. ಆದರೆ ವಿದೇಶ ಯಾತ್ರೆಗೆ ವಿಮಾನ ಟಿಕೆಟ್ ಖರೀದಿಸುವುದು ಸಾಧ್ಯ.

ವೀರ ಸಾವರ್ಕರ್ ಆಸ್ಕರ್‌ಗೆ ಪ್ರವೇಶ

ಲಾಪತಾ ಲೇಡೀಸ್ ಚಿತ್ರದ ನಂತರ ಇದೀಗ ಬಾಲಿವುಡ್ ನಟ ರಣ ದೀಪ್ ಹೂಡಾ ನಟಿಸಿ, ನಿರ್ದೇಶಿಸಿರುವ ಸ್ವಾತಂತ್ರ್ಯ ವೀರ ಸಾವರ್ಕರ್ ಚಿತ್ರ 2025ನೇ ಸಾಲಿನ ಆಸ್ಕರ್ ಪ್ರಶಸ್ತಿಗೆ ಪ್ರವೇಶ ಪಡೆದಿದೆ.

ಸಂಪಾದಕೀಯ ಪುಟಗಳು

ಸೂರ್ತಿ ಸೆಲ್ಲೆಯೋ, ಕ್ರೂರ ರಕ್ತಸಿಯೋ?
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ಬದುಕೇ ಕಲಬೆರಕೆ, ತುಪ್ಪವೇನು ಮಹಾ?!
ಲೋಕಮತ
ಲೋಕೇಶ್ ಕಾಯರ್ಗ
ಸಂ.ಪುಟ | 7

ಬಿಎನ್‌ಎಸ್ 218ರಲ್ಲಿ ನೀಡಿದ್ದ ಪ್ರಾಸಿಕ್ಯೂಷನ್ ರದ್ದು | 17 'ಎ'ಗೆ ಮಾತ್ರ ಊರ್ಜಿತವೆಂದ ಪೀಠ

ಮುಂದಿನ ಕಾನೂನು ಹೋರಾಟಕ್ಕೆ ಸಿದ್ಧತೆ ಶುರು | ರಾಜಕೀಯವಾಗಿ ಹೋರಾಡಲು ಕಾಂಗ್ರೆಸ್ ಸಭೆ

ಸಿಎಂಗೆ ಭಾಗಶಃ ರಿಲೀಫ್

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಿಆರ್‌ಪಿಸಿ 17'ಎ' ಅಡಿ ಪ್ರಾಥಮಿಕ ತನಿಖೆಗೆ ಅನುಮತಿ ನೀಡಿರುವ ಹೈಕೋರ್ಟ್, ರಾಜ್ಯಪಾಲರು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 218ರಲ್ಲಿ ನೀಡಿದ್ದ ಪ್ರಾಸಿಕ್ಯೂಷನ್ ಆದೇಶವನ್ನು ತಿರಸ್ಕರಿಸಿದೆ. ಈ ಮೂಲಕ ನೇರ ಪ್ರಾಸಿಕ್ಯೂಷನ್ ತೂಗುಗತ್ತಿಯಿಂದ ಸಿಎಂ ಸಿದ್ದರಾಮಯ್ಯ ಪಾರಾಗಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನ ಹಂಚಿಕೆ ಸಂಬಂಧ ಮುಖ್ಯಮಂತ್ರಿ ವಿರುದ್ಧದ ಕ್ರಿಮಿನಲ್ ಪ್ರಕರಣ ತನಿಖೆಗೆ ರಾಜ್ಯಪಾಲರ ಆದೇಶ ಪ್ರಶ್ನಿಸಿ ಸಿದ್ದರಾಮಯ್ಯ ಅವರು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಮಂಗಳವಾರ ಮಧ್ಯಾಹ್ನ 197 ಪುಟಗಳ ಸುದೀರ್ಘ ತೀರ್ಪು ಪ್ರಕಟಿಸಿದೆ.

ರಾಜ್ಯಪಾಲರು 17 'ಎ'ನಲ್ಲಿ ತನಿಖೆಗೆ ಅವಕಾಶ ನೀಡಿರುವುದು ಮೇಲ್ನೋಟಕ್ಕೆ ಸಿದ್ದರಾಮಯ್ಯ ಅವರಿಗೆ ಹಿನ್ನಡೆ ಎನ್ನುವ ವಿಶ್ಲೇಷಣೆಗಳು ಕೇಳಿಬರುತ್ತಿದ್ದರೂ, ಸೂಕ್ಷ್ಮವಾಗಿ ಗಮನಿಸಿದರೆ, ಇದೊಂದು 'ಸುದೀರ್ಘ' ಪ್ರಕ್ರಿಯೆಯಾಗಿದೆ. ಒಂದು ವೇಳೆ 218ರಲ್ಲಿ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಿದ್ದರೆ ಸಿಎಂಗೆ ಸಂಕಷ್ಟ ಎದುರಾಗುತ್ತಿತ್ತು. ಆದರೀಗ ಅದನ್ನು ತಿರಸ್ಕರಿಸಿರುವುದರಿಂದ ಮುಖ್ಯಮಂತ್ರಿಗಳು ನಿರಾಳರಾಗಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿವೆ.

ತೀರ್ಪಿನ ಸಾರಾಂಶ: ದೂರುದಾರರು ದೂರನ್ನು ದಾಖಲಿಸಲು ಅಥವಾ ರಾಜ್ಯಪಾಲರಿಂದ ಅನುಮೋದನೆ ಪಡೆಯಲು ಸಮರ್ಥರಾಗಿದ್ದಾರೆ. ವಾಸ್ತವ ಪರಿಸ್ಥಿತಿಯಲ್ಲಿ ಪಿಸಿ ಕಾಯಿದೆಯ ಸೆಕ್ಷನ್ 17 'ಎ' ಅಡಿಯಲ್ಲಿ ಅನುಮೋದನೆ ಕಡ್ಡಾಯವಾಗಿದೆ. ಕಾಯಿದೆಯ ನಿಬಂಧನೆಗಳ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗಾಗಿ ಸಾರ್ವಜನಿಕ ನೌಕರನ ವಿರುದ್ಧ ಬಿಎನ್‌ಎಸ್‌ಎಸ್ ಸಿಆರ್‌ಪಿಸಿ 223 ರ ಸೆಕ್ಷನ್ 200 ರ ಅಡಿಯಲ್ಲಿ ದಾಖಲಿಸಲಾದ ಖಾಸಗಿ ದೂರಿನಲ್ಲಿ ಪೊಲೀಸ್ ಅಧಿಕಾರಿಯು ಅನುಮೋದನೆ ಪಡೆಯಲು ಸೆಕ್ಷನ್ 17 'ಎ'ನಲ್ಲಿ ಎಲ್ಲಿಯೂ ಅಗತ್ಯವಿಲ್ಲ. ಅಂತಹ ಅನುಮೋದನೆ ಪಡೆಯುವುದು ದೂರುದಾರರ ಕರ್ತವ್ಯ ಎಂದು ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಸಾಮಾನ್ಯ ಪರಿಸ್ಥಿತಿಯಲ್ಲಿ ರಾಜ್ಯಪಾಲರು ಭಾರತದ ಸಂವಿಧಾನದ 163ನೇ ವಿಧಿಯ ಅಡಿಯಲ್ಲಿ ಪಡೆದಂತೆ ಮಂತ್ರಿಗಳ ಮಂಡಳಿಯ ಸಹಾಯ ಮತ್ತು ಸಲಹೆಯ ಮೇರೆಗೆ ಕಾರ್ಯನಿರ್ವಹಿಸಬೇಕಾಗುತ್ತದೆ. ಆದರೆ ಕೆಲ ಸಂದರ್ಭಗಳಲ್ಲಿ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಬಹುದು. ಪ್ರಸ್ತುತ ಪ್ರಕರಣವು ಅಂತಹದ್ದು. ರಾಜ್ಯಪಾಲರು ಸ್ವತಂತ್ರ ವಿವೇಚನಾಧಿಕಾರ ಚಲಾಯಿಸುವ ಕ್ರಮದಲ್ಲಿ ಯಾವುದೇ ದೋಷ ಕಂಡುಬಂದಿಲ್ಲ.

ಆದೇಶ ಕಾಯಿದೆಯ ಸೆಕ್ಷನ್ 17 'ಎ' ಅಡಿಯಲ್ಲಿ ಅನುಮೋದನೆಗೆ ನಿರ್ಬಂಧಿಸಲು ಓದಲಾಗುತ್ತದೆ ಮತ್ತು ಬಿಎನ್‌ಎಸ್‌ಎಸ್‌ನ ಮಂಜೂರಾತಿ 218 ಅನ್ನು ನೀಡುವ ಆದೇಶವಲ್ಲ. ಅರ್ಜಿಯಲ್ಲಿ ವಿವರಿಸಿರುವ ಸಂಗತಿಗಳು ನಿಸ್ಸಂದೇಹವಾಗಿ ತನಿಖೆಯ ಅಗತ್ಯವಿರುತ್ತದೆ. ಈ ಎಲ್ಲ ಕಾಯಿದೆಗಳ ಫಲಾನುಭವಿಯು ಹೊರಗಿನವರು ಯಾರೂ ಅಲ್ಲ, ಆದರೆ ಅರ್ಜಿದಾರರ ಪತ್ನಿ ಎಂಬುದು ಮುಖ್ಯ ಎಂದು ತೀರ್ಪಿನಲ್ಲಿದೆ.

ಸಿಎಂ ಸಿದ್ದರಾಮಯ್ಯ ಮುಂದಿನ ನಡೆ ಏನಾಗಿರಬಹುದು?

ಹೈಕೋರ್ಟ್ ದ್ವಿಸದಸ್ಯ ಪೀಠದಲ್ಲಿಯೇ ಈ ಆದೇಶವನ್ನು ಪ್ರಶ್ನಿಸಬಹುದು

ಸುಪ್ರೀಂಕೋರ್ಟ್‌ನಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಬಹುದು

ವಿಶೇಷ ನ್ಯಾಯಾಲಯದಲ್ಲಿ ಬರುವ ತೀರ್ಪಿನ ಮೇಲೆ ಯಾವ ರೀತಿಯಲ್ಲಿ ಹೋರಾಟ ಎನ್ನುವುದು ತೀರ್ಮಾನ

ಒಂದು ವೇಳೆ ವಿಶೇಷ ನ್ಯಾಯಾಲಯದಲ್ಲಿ ತನಿಖೆಗೆ ಆದೇಶಿಸಿ, ಅದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬಹುದು

ಕಾನೂನಾತ್ಮಕ ಹೋರಾಟದೊಂದಿಗೆ ರಾಜಕೀಯವಾಗಿ ಹೋರಾಟ ಮುಂದುವರಿಯಲಿದೆ

ಬಿಜೆಪಿಯವರ ಪಿತೂರಿಗೆ ಹೆದರಿ ರಾಜೀನಾಮೆ ನೀಡುವುದಿಲ್ಲ. ನಾನು ಹೋರಾಟದಿಂದ ಬಂದವನು. ನಿಮ್ಮ ಷಡ್ಯಂತ್ರವನ್ನು ಸೋಲಿಸುತ್ತೇನೆ. ರಾಜ್ಯದಲ್ಲಿ ಸುಭದ್ರ ಸರಕಾರವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ಹಾಗೂ ನನ್ನ ಸುದೀರ್ಘ ರಾಜಕೀಯ ಜೀವನಕ್ಕೆ ಮಸಿ ಬಳಿಯುವ ಪ್ರಯತ್ನ ನಡೆಸಿದೆ. ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ, ಬಿಎನ್‌ಎಸ್ ಪ್ರಕಾರ 218 ಹಾಗೂ ಪಿಸಿ ಕಾಯಿದೆ 19ರಂತೆ ತನಿಖೆಗೆ ಅನುಮತಿ ನೀಡುವುದನ್ನು ತಿರಸ್ಕರಿಸಿ, ಪಿಸಿ ಕಾಯಿದೆಯ 17 ಎ ಪ್ರಕಾರ ತನಿಖೆಗೆ ಹೈಕೋರ್ಟ್ ಆದೇಶ ನೀಡಿದೆ. ಈ ತೀರ್ಪಿನ ಮೇಲೆ ಕಾನೂನು ಹೋರಾಟದ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚೆ ಮಾಡಿ, ಮುಂದಿನ ಕ್ರಮದ ಬಗ್ಗೆ ತೀರ್ಮಾನ ಮಾಡಲಾಗುವುದು.

– **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಆದೇಶದಲ್ಲಿನ ಪ್ರಮುಖಾಂಶ

- ದೂರುದಾರರು ದೂರನ್ನು ದಾಖಲಿಸಲು ಅಥವಾ ರಾಜ್ಯಪಾಲರಿಂದ ಅನುಮೋದನೆ ಪಡೆಯಲು ಸಮರ್ಥರು
- ಪಿಸಿ ಕಾಯಿದೆಯ ಸೆಕ್ಷನ್ 17 'ಎ' ಅಡಿಯಲ್ಲಿ ಅನುಮೋದನೆ ಕಡ್ಡಾಯ
- ರಾಜ್ಯಪಾಲರು ಸ್ವತಂತ್ರ ವಿವೇಚನಾಧಿಕಾರ ಚಲಾಯಿಸುವ ಕ್ರಮದಲ್ಲಿ ಯಾವುದೇ ದೋಷ ಕಂಡುಬಂದಿಲ್ಲ
- ಅರ್ಜಿಯಲ್ಲಿ ವಿವರಿಸಿರುವ ಸಂಗತಿಗಳು ನಿಸ್ಸಂದೇಹವಾಗಿ ತನಿಖೆಯ ಅಗತ್ಯವಿರುತ್ತದೆ
- ಪ್ರಕರಣದಲ್ಲಿ ಫಲಾನುಭವಿಯು ಹೊರಗಿನವರಲ್ಲ, ಆದರೆ ಅರ್ಜಿದಾರರ (ಸಿಎಂ) ಪತ್ನಿ ಎಂಬುದು ಮುಖ್ಯ

17 'ಎ' ಎಂದರೇನು?

2018ರಲ್ಲಿ ಪಿಸಿ ಕಾಯಿದೆಗೆ ತಿದ್ದುಪಡಿ ಮಾಡುವ ಮೂಲಕ ಸೆಕ್ಷನ್ 17 'ಎ' ಅನ್ನು ಪರಿಚಯಿಸಲಾಗಿದೆ. ಅದು ಯಾವುದೇ ಪೊಲೀಸ್ ಅಧಿಕಾರಿಯು ತನ್ನ ಅಧಿಕೃತ ಕರ್ತವ್ಯಗಳ ನಿರ್ವಹಣೆಯಲ್ಲಿ ಸಾರ್ವಜನಿಕ ನೌಕರನು ಮಾಡಿದ ಯಾವುದೇ ಶಿಫಾರಸು ಅಥವಾ ನಿರ್ಧಾರಕ್ಕೆ ಸಂಬಂಧಿಸಿದ ಪ್ರಕರಣದ ಸತ್ಯಾಸತ್ಯತೆ ಬಗ್ಗೆ ಮಾಹಿತಿ ಕಲೆ ಹಾಕಬಹುದು. ಅಂದರೆ ಈ ಪ್ರಕರಣದಲ್ಲಿ ಯಾರ ಯಾರ ಪಾತ್ರವೇನು? ಪ್ರಭಾವದ ಬಗ್ಗೆ ತನಿಖೆ ನಡೆಸಬಹುದು. ತನಿಖೆಯ ನಂತರ 19 (ಎ) ಅಡಿ ಚಾರ್ಜ್‌ಶೀಟ್ ಸಲ್ಲಿಕೆಗೆ ರಾಜ್ಯಪಾಲರ ಅನುಮತಿ ಕಡ್ಡಾಯವಾಗಿ ಪಡೆದುಕೊಳ್ಳಬೇಕು.

ವಾದ ಮಂಡಿಸಿದವರು...

ಸಿಎಂ ಪರ: ಹಿರಿಯ ವಕೀಲ ಡಾ.ಅಭಿಷೇಕ್ ಮನು ಸಿಂಘ್ವಿ, ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ವಕೀಲ ಶತಭಿಷ್ ಶಿವಣ್ಣ.

ಸಿಎಂ ವಿರುದ್ಧ: ರಾಜ್ಯಪಾಲರ ವಿಶೇಷ ಕರ್ತವ್ಯಾಧಿಕಾರಿ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಕೇವಿಯೇಟರ್ ಸ್ನೇಹಮಯಿ ಕೃಷ್ಣ ಪರವಾಗಿ ವಕೀಲ ಮಣೀಂದರ್ ಸಿಂಗ್, ಕೆ.ಜಿ.ರಾಘವನ್, ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್, ಟಿ.ಜೆ.ಅಬ್ರಹಾಂ ಪರವಾಗಿ ವಕೀಲ ರಂಗನಾಥ್ ರೆಡ್ಡಿ, ಪಿ.ಎಸ್.ಪ್ರದೀಪ್ ಕುಮಾರ್ ವಕೀಲ ಪ್ರಭುಲಿಂಗ ನಾವದಗಿ.

ಬಿಎನ್‌ಎಸ್‌ಎಸ್ 218

ಭಾರತೀಯ ನಾಗರಿಕಾ ಸುರಕ್ಷಾ ಸಂಹಿತಾ-2023 ರ ಕಾಯಿದೆಯ ಅನ್ವಯ ಸಿಎಂ ಪ್ರಕರಣಕ್ಕೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 218 ಅನ್ವಯವಾಗುವುದಿಲ್ಲ. ನ್ಯಾಯಾಧೀಶರು ಅಥವಾ ಮ್ಯಾಜಿಸ್ಟ್ರೇಟ್, ಸರಕಾರಿ ಅಧಿಕಾರಿಗಳ ಪ್ರಾಸಿಕ್ಯೂಷನ್‌ಗೆ ಮಾತ್ರ ಈ ಸೆಕ್ಷನ್ ಅನ್ವಯವಾಗುತ್ತದೆ.

ಅಧೀನ ನ್ಯಾಯಾಲಯದಲ್ಲಿ ಇಂದು ತೀರ್ಪು?

ಸಿಎಂ ಸಿದ್ದರಾಮಯ್ಯ ಅವರಿಗೆ ಬುಧವಾರವೂ ಮಹತ್ವದ ದಿನವಾಗಿದೆ. ಹೈಕೋರ್ಟ್‌ನಲ್ಲಿ ಅರ್ಜಿ ವಜಾಗೊಳ್ಳುತ್ತಿದ್ದಂತೆ ಅಧೀನ ನ್ಯಾಯಾಲಯಕ್ಕಿದ್ದ ತಡೆಯಾಜ್ಞೆ ಕೂಡ ತೆರವಾಗಿದೆ. ಇಂದು ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಸಿದ್ದರಾಮಯ್ಯ ಅವರಿಗೆ ಸಂಬಂಧಿತ ಅರ್ಜಿ ವಿಚಾರಣೆಗೆ ನಿಗದಿಯಾಗಿದೆ. ಮೂಡಾ ಪ್ರಕರಣ ಪ್ರಾಸಿಕ್ಯೂಷನ್ ಸಂಬಂಧಪಟ್ಟ ಅರ್ಜಿ ವಿಚಾರಣೆಗೆ ಬದಲಿದ್ದು, ಕಲಾಪದ ಆರಂಭದಲ್ಲೇ ಆದೇಶ ನೀಡಲು ಅರ್ಜಿದಾರರು ಮನವಿ ಮಾಡಿದ್ದಾರೆ. ಹೈಕೋರ್ಟ್ ತೀರ್ಪಿನಂತೆ ಅಧೀನ ನ್ಯಾಯಾಲಯದ ತಡೆಯಾಜ್ಞೆ ತೆರವುಗೊಂಡಿರುವುದರಿಂದ ಜನಪ್ರತಿನಿಧಿಗಳ ಕೋರ್ಟ್ ತನಿಖೆಗೆ ಆದೇಶ ನೀಡಿದರೆ ಸಿಎಂ ವಿರುದ್ಧ ಎಫ್‌ಐಆರ್ ಹಾಕಬಹುದಾಗಿದೆ.

ಸಿಎಂ ಬೆನ್ನಿಗೆ ನಿಂತ ಸಂಪುಟ

ಮುಖ್ಯಮಂತ್ರಿ ಬೆಂಬಲಕ್ಕೆ ಇಡೀ ಸಂಪುಟ ನಿಂತಿದೆ. ಹೈಕೋರ್ಟ್ ತೀರ್ಪು ಪ್ರಕಟವಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೃಹ ಕಚೇರಿ ಕೃಷ್ಣಾದಲ್ಲಿ ಹಿರಿಯ ಸಚಿವರು ಹಾಗೂ ಆಪ್ತರೊಂದಿಗೆ ಚರ್ಚೆ ನಡೆಸಿದರು. ಈ ವೇಳೆ ಎಲ್ಲ ಸಚಿವರು, ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಬೆನ್ನಿಗೆ ನಿಲ್ಲುವ ಭರವಸೆ ನೀಡಿದ್ದಾರೆ. ಕೇವಲ ರಾಜ್ಯ ನಾಯಕರು ಮಾತ್ರವ ಲ್ಲದೇ, ದೆಹಲಿ ನಾಯಕರು ಸಿದ್ದರಾಮಯ್ಯಗೆ ಕರೆ ಮಾಡಿ ಚರ್ಚೆ ನಡೆಸಿದ್ದಾರೆ. ಮುಖ್ಯಮಂತ್ರಿಗಳ ನಿವಾಸಕ್ಕೆ ಮಂಗಳವಾರ ಮಧ್ಯಾಹ್ನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವ ಎಚ್.ಸಿ.ಮಹದೇವಪ್ಪ, ಕೆ.ಜೆ.ಜಾರ್ಜ್, ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಭೇಟಿ ನೀಡಿ ಮುಂದಿನ ರಾಜಕೀಯ ಹಾಗೂ ಕಾನೂನಾತ್ಮಕ ಹೋರಾಟಕ್ಕೆ ಸಂಬಂಧಿಸಿದಂತೆ ಚರ್ಚಿಸಿದರು.

ಹೈಕೋರ್ಟ್ 17 'ಎ' ಅಡಿ ತನಿಖೆಗೆ ಆದೇಶ ನೀಡಿದೆ. ಹಾಗಾಗಿ ಲೋಕಾಯುಕ್ತ ಪೊಲೀಸರು ತನಿಖೆ ನಡೆಸಲಿದ್ದಾರೆ. ಇಲ್ಲಿ ಸಿಎಂ ವಿರುದ್ಧ ಎಫ್‌ಐಆರ್ ಮಾಡಲು ಬರುವುದಿಲ್ಲ. ಸಿಎಂ ಪಾತ್ರದ ಬಗ್ಗೆ ಮಾತ್ರ ತನಿಖೆ ನಡೆಸಿ ವರದಿ ಕೊಡಬೇಕಾಗಿದೆ. ರಾಜ್ಯಪಾಲರ ಪಾತ್ರ ಇಲ್ಲಿಗೆ ಮುಗಿದಿದೆ.

– **ಎ.ಎಸ್.ಪೊನ್ನಣ್ಣ**, ಸಿಎಂ ಕಾನೂನು ಸಲಹೆಗಾರರು

ಸರಕಾರ ಅಸ್ಥಿರಗೊಳಿಸಲು ಸಾಧ್ಯವಿಲ್ಲ



ಕರ್ನಾಟಕದ ರಾಜ್ಯಪಾಲರು ಸರಕಾರವನ್ನು ಅಸ್ಥಿರಗೊಳಿಸಲು ಭಾರಿ ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿ ಪ್ರತಿಪಕ್ಷಗಳು ಆಡಳಿತದಲ್ಲಿರುವ ರಾಜ್ಯದಲ್ಲಿ ಅಲ್ಲಿನ ಸರಕಾರಗಳನ್ನು, ರಾಜಭವನವನ್ನು ಬಳಸಿಕೊಂಡು ಅಸ್ಥಿರಗೊಳಿಸುವುದು ಇದೇ ಮೊದಲಲ್ಲ. ಈಗಾಗಲೇ ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಲ್ಲಿ ಈ ಪ್ರಯತ್ನ ನಡೆಸಲಾಗಿತ್ತು. ಆದರೆ ಕರ್ನಾಟಕದಲ್ಲಿ ಇದು ಸಾಧ್ಯವಿಲ್ಲ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ. ಕರ್ನಾಟಕದ ಜನರು ದೆಹಲಿ ದರ್ಬಾರ್ ಮುಂದೆ ಮಂಡಿಯೂರಿ ಕೂರುವುದಕ್ಕೆ ರಾಜ್ಯ ಕಾಂಗ್ರೆಸ್ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ. ನಮ್ಮ ಸರಕಾರ ದೇಶದಲ್ಲಿರುವ ಉತ್ತಮ ಸರಕಾರವಾಗಿದ್ದು, ರಾಜ್ಯದ ಜನರ ಮಾತಿಗೆ ಮಾತ್ರ ಮನ್ನಣೆ ನೀಡುತ್ತೇವೆ ಹೊರತು, ದೆಹಲಿ ದರ್ಬಾರ್‌ಗೆ ಅಲ್ಲ. ಆದ್ದರಿಂದ ಕರ್ನಾಟ ಕದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರಕಾರವನ್ನು ಯಾವುದೇ ಕಾರಣಕ್ಕೂ ಅಸ್ಥಿರಗೊಳಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಜಗ್ಗದ ಸಿಎಂ; ಕಾನೂನು ಹೋರಾಟಕ್ಕೆ ರೆಡಿ

ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆಯುವ ಲೆಕ್ಕಾಚಾರದಲ್ಲಿದ್ದ ಪ್ರತಿಪಕ್ಷಗಳ ಯೋಜನೆಗೆ ಮುಖ್ಯಮಂತ್ರಿಗಳು ಜಗ್ಗದೇ, ರಾಜಕೀಯ ಹಾಗೂ ಕಾನೂನು ಹೋರಾಟಕ್ಕೆ ಮುಂದಾಗಿದ್ದಾರೆ. ಹೈಕೋರ್ಟ್‌ನಲ್ಲಿ ಸಿದ್ದರಾಮಯ್ಯ ವಿರುದ್ಧ 17'ಎ'ನಲ್ಲಿರುವ ಪ್ರಕರಣದ ತನಿಖೆಗೆ ವಿಶೇಷ ಜನಪ್ರತಿನಿಧಿಗಳ ನ್ಯಾಯಾಲಯ ಅನುಮತಿ ನೀಡಿದರೂ, ಅದರ ವಿರುದ್ಧ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ವಿವಿಧ ಹಂತದಲ್ಲಿ ಪ್ರಶ್ನಿಸಲು ಅವಕಾಶವಿರುವುದರಿಂದ ಇದೊಂದು ಸುದೀರ್ಘ ಪ್ರಕ್ರಿಯೆ ಎನ್ನುವುದು ಸ್ಪಷ್ಟವಾಗಿದೆ. ಆದ್ದರಿಂದ ಈ ಪ್ರಕರಣದಲ್ಲಿ ಜಗ್ಗದೇ ಮುಂದುವರಿಯಲು ಸಿಎಂ ತೀರ್ಮಾನಿಸಿದ್ದಾರೆ ಎನ್ನಲಾಗಿದೆ. ಹೈಕೋರ್ಟ್ ಏಕಸದಸ್ಯ ಪೀಠದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಅರ್ಜಿ ಸಲ್ಲಿಸುವಾಗಲೇ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಬರಲಿದೆ. ಆದ್ದರಿಂದ ಅದಕ್ಕೆ ಸಜ್ಜಾಗಿರುವಂತೆ ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದರು. ಇದರೊಂದಿಗೆ ಸಿಂಘ್ವಿ ಅವರೂ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ಬೇಕಾದ ಅಗತ್ಯ ಸಿದ್ಧತೆಗಳನ್ನು, ವಾದ ಪೂರ್ಣಗೊಂಡ ಕೂಡಲೇ ಆರಂಭಿಸಿದ್ದಾರೆ. ಆದ್ದರಿಂದ ಹೈಕೋರ್ಟ್ ತೀರ್ಪು ಸಿದ್ದರಾಮಯ್ಯ ಅವರಿಗೆ ಹೆಚ್ಚು ಆಘಾತ ನೀಡಿಲ್ಲ ಎನ್ನುವ ಮಾತುಗಳನ್ನು ಆಪ್ತರು ಹೇಳಿದ್ದಾರೆ.

ಎರಡು ಸಭೆಗಳಲ್ಲಿ ಭಾಗವಹಿಸಿದ್ದ ಸಿಎಂ

ಹೈಕೋರ್ಟ್‌ನಲ್ಲಿ ತೀರ್ಪು ಪ್ರಕಟವಾಗುವುದು ನಿಗದಿಯಾಗಿದ್ದರೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಎರಡು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಖಾಸಗಿ ಹೋಟೆಲ್‌ನಲ್ಲಿ ನಡೆದ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಬೆಳಗ್ಗೆ 11ಗಂಟೆಗೆ ಭಾಗವಹಿಸಿದ್ದ ಸಿಎಂ, ತೀರ್ಪು ಪ್ರಕಟಗೊಳ್ಳುವ ಮೊದಲು ಅಲ್ಲಿಂದ ನಿರ್ಗಮಿಸಿದರು. ಬಳಿಕ ಸಂಜೆ ವೇಳೆಗೆ ಯಲಹಂಕದಲ್ಲಿ ಉದ್ಘಾಟನೆಗೊಂಡ ರಾಜ್ಯದ ಮೊದಲ ಅನಿಲ್ ಆಧಾರಿತ ವಿದ್ಯುತ್ ಸ್ಥಾವರ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಪ್ರಕರಣದ ಬಗ್ಗೆ ಯಾವುದೇ ಆತಂಕವಿಲ್ಲ ಎನ್ನುವ ಸ್ಪಷ್ಟ ಸಂದೇಶ ರವಾನಿಸುವ ಪ್ರಯತ್ನ ಮಾಡಿದರು.

ರಾಜ್ಯಾದ್ಯಂತ ಬಿಗಿ ಭದ್ರತೆ

ರಾಜ್ಯಪಾಲರ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದ ಬೆನ್ನಲ್ಲೇ ರಾಜ್ಯಾದ್ಯಂತ ಕಟ್ಟೆಚ್ಚರ ವಹಿಸಲಾಗಿದ್ದು, ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹೈಕೋರ್ಟ್ ತೀರ್ಪು ನೀಡಿರುವ ಕಾರಣ ಪ್ರತಿಪಕ್ಷಗಳಾದ ಬಿಜೆಪಿ, ಜೆಡಿಎಸ್ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ, ಮುತ್ತಿಗೆ ಹಾಕುವ ಸಾಧ್ಯತೆಯಿರುವುದರಿಂದ ಸಿಎಂ ನಿವಾಸಕ್ಕೆ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ.

ಬಿಜೆಪಿ ಸಭೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅರ್ಜಿ ವಜಾಗೊಳ್ಳುತ್ತಿದ್ದಂತೆ ರಾಜ್ಯ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಪದಾಧಿಕಾರಿಗಳ ತುರ್ತು ಸಭೆ ನಡೆಸಲಾಯಿತು. ಮುಂದಿನ ದಿನದಲ್ಲಿ ಈ ಪ್ರಕರಣವನ್ನು ಯಾವ ರೀತಿ ತೆಗೆದುಕೊಂಡು ಹೋಗಬೇಕು? ಮುಖ್ಯಮಂತ್ರಿಗಳ ರಾಜೀನಾಮೆಗೆ ಯಾವ ರೀತಿಯಲ್ಲಿ ಒತ್ತಡ ಹೇರಬಹುದು ಎನ್ನುವ ಬಗ್ಗೆ ಚರ್ಚೆ ನಡೆಸಿದ್ದಾರೆ.

ಹಳ್ಳಿಯಿಂದ ದಿಲ್ಲಿಯವರೆಗೂ ಸಿದ್ದರಾಮಯ್ಯರಿಗೆ ಬೆಂಬಲ

ಬಿಜೆಪಿ ಹಾಗೂ ಜೆಡಿಎಸ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಕುತಂತ್ರ ರೂಪಿಸಿದೆ. ಅವರ ಕುತಂತ್ರಕ್ಕೆ ನಮ್ಮ ಸರಕಾರ ಜಗ್ಗುವುದಿಲ್ಲ ಬಗ್ಗುವುದಿಲ್ಲ. ಇಡೀ ಪಕ್ಷ ಮತ್ತು ಸರಕಾರ ಮುಖ್ಯಮಂತ್ರಿಗಳೊಂದಿಗೆ ನಿಲ್ಲಲಿದೆ. ದೆಹಲಿಯಿಂದ ಹಳ್ಳಿಯವರೆಗೂ ಇಡೀ ಕಾಂಗ್ರೆಸ್ ಸಿದ್ದರಾಮಯ್ಯ ಅವರಿಗೆ ಬೆಂಬಲ ನೀಡಲಿದೆ. ನಾವು ಕಾನೂನು ಹೋರಾಟ ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ದೋಸ್ತಿ ಹೋರಾಟಕ್ಕೆ ಇದು ಮೊದಲ ಹಂತದ ವಿಜಯ

ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ ನಿರಂತರ ಹೋರಾಟ ನಡೆಸಿತ್ತು. ಸ್ವತಃ ಸಿಎಂ ಕುಟುಂಬವೇ ಫಲಾನುಭವಿಗಳಾಗಿರುವ ಮುಡಾ ಹಗರಣ ವಿರುದ್ಧ ಹೋರಾಟ ಹಮ್ಮಿಕೊಂಡಿದ್ದೆವು. ಬೆಂಗಳೂರು-ಮೈಸೂರು ಪಾದಯಾತ್ರೆ ನಡೆಸಿ ಬಿಜೆಪಿ- ಜೆಡಿಎಸ್ ಒಟ್ಟಾಗಿ ಯಶಸ್ವಿ ಹೋರಾಟ ಮಾಡಿದ್ದು, ಇದು ಮೊದಲ ಹಂತದ ಜಯ. ಸಿಎಂ ಕೂಡಲೇ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ನನ್ನ ನೈತಿಕತೆ ಏನು ಅನ್ನೋದು ಸಾಬೀತಾಗಲಿ

ಸಿಎಂ ಪ್ರಾಸಿಕ್ಯೂಷನ್ ವಿಚಾರವಾಗಿ ನಾನು ಯಾವುದೇ ಪ್ರತಿಕ್ರಿಯೆ ನೀಡಲ್ಲ. ನನ್ನ ನೈತಿಕತೆ ಏನು ಅನ್ನೋದು ಸಾಬೀತಾಗಲಿ. ಯಾವುದೇ ತೀರ್ಮಾನ ಆಗದೇ ಇದ್ದರೂ ನನ್ನನ್ನು ಒಂದು ಪ್ರಕರಣದಲ್ಲಿ ಆರೋಪಿ ಮಾಡುತ್ತಿದ್ದಾರೆ. ನನ್ನ ಮೇಲಿನ ಆರೋಪ ಎಲ್ಲ ಮುಗಿಯಲಿ, ನಂತರ ಮಾತನಾಡುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಜಮ್ಮು ಕಾಶ್ಮೀರದಲ್ಲಿ ಮತದಾನ ಇಂದು

ಶ್ರೀನಗರ: ಜಮ್ಮು- ಕಾಶ್ಮೀ ರದ ವಿಧಾನಸಭಾ ಚುನಾ ವಣೆಗೆ ಬುಧವಾರ 2ನೇ ಹಂತದ ಮತದಾನ ನಡೆ ಯಲಿದೆ. ಆರು ಜಿಲ್ಲೆಗಳ 26 ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದ್ದು, ಒಟ್ಟು 239 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 25 ಲಕ್ಷ ಮತದಾರರು ಹಕ್ಕು ಚಲಾಯಿಸಲಿದ್ದಾರೆ.

ಫನ್‌ತರಂಗ

– ರಘುಪತಿ ಶೃಂಗೇರಿ –

ಮಧ್ಯರಾತ್ರಿ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ, ವೀಕ್ಷಿಸಿದ ಸಚಿವ
ಸುದ್ದಿ



ಪರಪ್ಪನ ಅಗ್ರಹಾರದಲ್ಲೇ ವಶಕ್ಕೆ ಪಡೆದ ಎಸ್‌ಐಟಿ

ಮುನಿರತ್ನ 12 ದಿನ ಕಸ್ಟಡಿಗೆ

ಬೆಂಗಳೂರು: ಶಾಸಕ ಮುನಿರತ್ನ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿ ದಂತೆ 12 ದಿನ ಎಸ್‌ಐಟಿ ಕಸ್ಟಡಿಗೆ ನೀಡಿ 42ನೇ ಎಸಿಎಂಎಂ ಕೋರ್ಟ್ ಆದೇಶ ಹೊರಡಿಸಿದೆ. ಶಾಸಕ ಮುನಿರತ್ನ ವಿರುದ್ಧದ ಆರೋಪಗಳ ಹಿನ್ನೆಲೆಯಲ್ಲಿ ಸರಕಾರದ ಮೇಲೆ ಬಹಳಷ್ಟು ಒತ್ತಡಗಳಿತ್ತು. ಜಾತಿ ನಿಂದನೆ, ಅತ್ಯಾಚಾರ ಆರೋಪ ಪ್ರಕರಣ ವನ್ನು ಗಂಭೀರವಾಗಿ ಪರಿಗಣಿಸಿದ್ದ ರಾಜ್ಯ ಸರಕಾರ, ಈ ಪ್ರಕರಣದ ವಿಚಾರಣೆಗೆ ವಿಶೇಷ ತನಿಖಾ ತಂಡ ನೇಮಿಸಿತ್ತು. ಈ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡು ವಿಶೇಷ ತನಿಖಾ ತಂಡವು ಶಾಸಕ ಮುನಿರತ್ನ ಅವರನ್ನು ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ನೀಡುವಂತೆ ಎಸ್‌ಐಟಿ ಮನವಿ ಮಾಡಿತ್ತು. ಮಂಗಳವಾರ ಮುನಿರತ್ನ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಶೇಷ ನ್ಯಾಯಾಲಯಕ್ಕೆ ಹಾಜರಾಗಿದ್ದರು. ವಿಚಾರಣೆ ನಡೆಸಿದ ಕೋರ್ಟ್ ಶಾಸಕ ಮುನಿರತ್ನ ಅವರನ್ನು ಅಕ್ಟೋಬರ್ 5ರ ವರೆಗೆ ಎಸ್‌ಐಟಿ ಕಸ್ಟಡಿಗೆ ನೀಡಿ ಆದೇಶಿಸಿದೆ. ಆದೇಶದ ಪ್ರತಿ ಪಡೆದಿರುವ ಎಸ್‌ಐಟಿ, ಪರಪ್ಪನ ಅಗ್ರಹಾರ ಜೈಲಿನತ್ತ ತೆರಳಿ ಬಾಡಿ ವಾರೆಂಟ್ ಮೇಲೆ ಮುನಿರತ್ನ ಅವರನ್ನು ವಶಕ್ಕೆ ಪಡೆದಿದ್ದಾರೆ.

ಬೆದರಿಕೆ: ಇಬ್ಬರ ವಿರುದ್ಧ ಎಫ್‌ಐಆರ್

ಮುನಿರತ್ನ ವಿರುದ್ಧ ಮಹಿಳೆಯೊಬ್ಬರು ನೀಡಿರುವ ದೂರಿನಲ್ಲಿ ಸಾಕ್ಷಿ ಹೇಳದಂತೆ ಬೆದರಿಕೆ ಹಾಕಿದ ಆರೋಪದಡಿ ಶಾಸಕರ ಬೆಂಬಲಿಗರಿಬ್ಬರ ವಿರುದ್ಧ ಯಶವಂತಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಸಂಬಂಧ ಠಾಣಾ ವ್ಯಾಪ್ತಿಯ ವ್ಯಕ್ತಿಯೊಬ್ಬರು, ಬಿಜೆಪಿ ಕಾರ್ಯಕರ್ತೆ ಸುನಂದಮ್ಮ ಹಾಗೂ ಮತ್ತೊಬ್ಬ ವ್ಯಕ್ತಿಯ ವಿರುದ್ಧ ದೂರು ನೀಡಿದ್ದಾರೆ. 'ಸೆ.21ರ ಬೆಳಗ್ಗೆ 11.30ಕ್ಕೆ ಬಿಜೆಪಿ ಕಾರ್ಯಕರ್ತೆ ಸುನಂದಮ್ಮ ಮತ್ತು ಮತ್ತೊಬ್ಬ ವ್ಯಕ್ತಿ ಮನೆಗೆ ಬಂದು, ಮುನಿರತ್ನ ವಿರುದ್ಧ ಮಹಿಳೆಯೊಬ್ಬರು ನೀಡಿದ ದೂರಿನಲ್ಲಿ ನಿಮ್ಮ ತಾಯಿ ಸಾಕ್ಷಿದಾರರಾಗಿದ್ದಾರೆ. ಶಾಸಕರ ವಿರುದ್ಧ ಸಾಕ್ಷಿ ಹೇಳಿದರೆ ಮನೆಗೆ ಬೆಂಕಿ ಹಚ್ಚಿ ನಾಶ ಮಾಡುತ್ತೇವೆ ಎಂದು ಬೆದರಿಸಿದರು ಎಂದು ಅವರು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಹಿಂದೂಗಳಿಗೆ ಗುಡಿಗಳ ನಿರ್ವಹಣೆ ಬಿಟ್ಟುಕೊಡಿ

ದೆಹಲಿ: ಸರಕಾರದ ನಿಯಂತ್ರಣದಿಂದ ದೇವಸ್ಥಾನಗಳನ್ನು ಮುಕ್ತಗೊಳಿಸದಿದ್ದರೆ, ದೇಶವ್ಯಾಪಿ ಅಭಿಯಾನ ಹಮ್ಮಿಕೊಳ್ಳಲಾಗುವುದು ಎಂದು ವಿಎಚ್‌ಪಿ ಜಂಟಿ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಜೈನ್ ಎಚ್ಚರಿಕೆ ನೀಡಿದ್ದಾರೆ. ಹಿಂದೂ ದೇವಾಲಯಗಳನ್ನು ಸರಕಾರಗಳು ಹಿಂದೂಗಳಿಗೆ ಸೇರಿದ ಸಂಸ್ಥೆಗಳಿಗೆ ಬಿಟ್ಟುಕೊಡದಿದ್ದರೆ ನ್ಯಾಯಾಲಯದಲ್ಲೂ ಹೋರಾಟ ನಡೆಸಲಾಗುವುದು. ಈ ಅಭಿಯಾನದ ಭಾಗವಾಗಿ ಮೊದಲು ಎಲ್ಲ ರಾಜ್ಯಗಳಲ್ಲೂ ಪ್ರತಿಭಟನೆ ನಡೆಸಿ, ಸಿಎಂಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು ಎಂದರು.



ಹರಿಣಿ ಲಂಕಾ ಪ್ರಧಾನಿ

ಕೊಲಂಬೊ: ಶ್ರೀಲಂಕಾದ ನೂತನ ಪ್ರಧಾನ ಮಂತ್ರಿ ಯಾಗಿ ಹರಿಣಿ ಅಮರ ಸೂರಿಯಾ ಅವರು ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದರು. ಆ ಮೂಲಕ ಶ್ರೀಲಂಕಾ ದಲ್ಲಿ ಪ್ರಧಾನಿ ಹುದ್ದೆ ಅಲಂಕರಿಸಿದ 2ನೇ ಮಹಿಳೆ ಎನಿಸಿಕೊಂಡಿದ್ದಾರೆ.

ಇಸ್ರೇಲ್ ದಾಳಿಗೆ ಅಕ್ಷರಶಃ ನಲುಗಿದ ಲೆಬನಾನ್

ಪ್ರತಿ ನಿಮಿಷಕ್ಕೂ ಹೆಚ್ಚುತ್ತಿರುವ ಸಾವಿನ ಸಂಖ್ಯೆ

ಲೆಬನಾನ್: ಸಾವಿನ ಸಂಖ್ಯೆ 558ಕ್ಕೆ ಏರಿಕೆ

ಜೆರುಸಲೆಮ್/ಬೈರೂತ್: ಕಳೆದ 8 ದಿನಗಳಿಂದ ಇಸ್ರೇಲ್ ಲೆಬನಾನ್ ಮೇಲೆ ನಿರಂತರ ದಾಳಿ ನಡೆಸುತ್ತಿದ್ದು, ಲೆಬನಾನ್ ಜನತೆ ಅಕ್ಷರಶಃ ನಲುಗಿದ್ದಾರೆ.

ಮೃತಪಟ್ಟವರ ಸಂಖ್ಯೆ ಈವರೆಗೆ 558ಕ್ಕೆ ಏರಿಕೆಯಾಗಿದೆ. 50 ಮಕ್ಕಳು, 97 ಮಹಿಳೆಯರು ಸಾವನ್ನಪ್ಪಿದ್ದಾರೆ. ಗಾಯಗೊಂಡವರ ಸಂಖ್ಯೆ ಕನಿಷ್ಠ 1835 ಎಂದು ಲೆಬನಾನ್ ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಂಭವವಿದೆ. 1990ರ ಬಳಿಕ ಲೆಬನಾನ್‌ಗೆ ಇದು 'ಡೆಡ್ಲಿಯೆಸ್ಟ್ ಡೇ' ಎಂದು ಹೇಳಲಾಗಿದೆ.

ಲೆಬನಾನ್ ನಗರಗಳಲ್ಲಿನ ಜನರು ಜೀವ ರಕ್ಷಣೆಗೆ ಮನೆ ತೊರೆಯುವುದು ಅನಿವಾರ್ಯವಾಗಿದೆ. ಆದರೆ ಹೋಗುವುದೆಲ್ಲಿಗೆ ಎಂಬ ಗೊಂದಲದಲ್ಲಿ ಅಲ್ಲಿನ ನಾಗರಿಕರು ಕಂಗೆಟ್ಟಿದ್ದಾರೆ. ಇನ್ನೊಂ ದೆಡೆ ಪ್ರತಿ ನಿಮಿಷಕ್ಕೂ ಹೆಚ್ಚುತ್ತಿರುವ ಸಾವಿನ ಸಂಖ್ಯೆ, ಗಾಯಾಳುಗಳಿಂದ ಆಸ್ಪತ್ರೆಗಳು ಭರ್ತಿಯಾಗಿದ್ದು, ವೈದ್ಯಕೀಯ ಸೇವೆ ನೀಡಲು ಸಿಬ್ಬಂದಿ ಹರಸಾಹಸಪಡುತ್ತಿದ್ದಾರೆ.

- ಸಿರಿಯಾದತ್ತ 500ಕ್ಕೂ ಅಧಿಕ ಜನರ ಪ್ರಯಾಣ
- ಹಿಂಸಾಚಾರ ತಕ್ಷಣ ನಿಲ್ಲಿಸುವಂತೆ ಯುನಿಸೆಫ್ ಕರೆ
- ಲೆಬನಾನ್ ತೊರೆಯುವಂತೆ ಅಮೆರಿಕಾ ಪ್ರಜೆಗಳಿಗೆ ಸೂಚನೆ
- ಯುದ್ಧ ಸಹಿಸುವ ಶಕ್ತಿ ಇಲ್ಲ ಎಂದ ಯುಎನ್

ವಿವರಪುಟ → 8

ಉಕ್ರೇನ್: ಶಾಂತಿ ಸ್ಥಾಪನೆಗೆ ಸಹಕಾರ

ನ್ಯೂಯಾರ್ಕ್: ಅಮೆರಿಕ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಉಕ್ರೇನ್ ಅಧ್ಯಕ್ಷ ವ್ಲಾದಿಮಿರ್ ಝೆಲೆನ್ಸ್ಕಿ ಭೇಟಿಯಾಗಿದ್ದು, ಉಕ್ರೇನ್-ರಷ್ಯಾ ಸಂಘರ್ಷ ಕೊನೆಗೊಂಡು ಸ್ಥಿರತೆ ಸ್ಥಾಪನೆಗೆ ಎಲ್ಲ ರೀತಿಯ ಸಹಕಾರ ನೀಡಲು ಸಿದ್ಧ ಎಂದು ಹೇಳಿದ್ದಾರೆ.

ಎನ್‌ಕೌಂಟರ್; ಶವ ಹೊತ್ತೊಯ್ದ ನಕ್ಸಲರು

ಸುಕ್ಮಾ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಮಂಗಳವಾರ ನಡೆದ ಎನ್‌ಕೌಂಟರ್‌ನಲ್ಲಿ ಇಬ್ಬರು ನಕ್ಸಲರು ಹತರಾಗಿದ್ದಾರೆ. ಆದರೆ ನಕ್ಸಲರೇ ಹತರಾದವರ ಮೃತದೇಹಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವ್ಹಾಣ್ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ನವೋದಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಹಾವೇರಿ: ಜಿಲ್ಲೆಯ ಹಾನಗಲ್ ತಾಲೂಕು ಮಹಾರಾಜಪೇಟೆ ಬಳಿಯ ಜವಾಹರ ನವೋದಯ ವಿದ್ಯಾಲಯದ 2025-26ನೇ ಸಾಲಿಗೆ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ದಿನಾಂಕ 07-10-2024ರವರೆಗೆ ಅವಧಿ ವಿಸ್ತರಿಸಲಾಗಿದೆ. ಪ್ರವೇಶ ಪರೀಕ್ಷದೆಗೆ ಅರ್ಹತೆ ಪಡೆದ ವಿದ್ಯಾರ್ಥಿಗಳು ನವೋದಯ ವಿದ್ಯಾಲಯದ ವೆಬ್‌ಸಯಟ್‌ನಲ್ಲಿ www.navodaya.gov.in ಅಥವಾ https://cbseitms.rcil.gov.in/nvs/ ಜಾಲತಾಣದಲ್ಲಿ ಅರ್ಜಿ ಸಲ್ಲಿಸಬೇಕು. ದಿನಾಂಕ 8-10-2024 ಮತ್ತು 09-10-2024 ರಂದು ಎರಡು ದಿನಗಳಕಾಲ ಸಲ್ಲಿಸಿದ ಅರ್ಜಿಯಲ್ಲಿ ವಿದ್ಯಾರ್ಥಿಗಳ ದತ್ತಾಂಶದಲ್ಲಿ ಲಿಂಗ, ವರ್ಗ, ಪ್ರದೇಶ, ಅಂಗವೈಕಲ್ಯತೆ ಹಾಗೂ ಪರೀಕ್ಷಾ ಮಾಧ್ಯಮ ಆಯ್ಕೆ ಕುರಿತ ಸೀಮಿತ ತಿದ್ದುಪಡಿಗೆ ಮಾತ್ರ ಅವಕಾಶ ಇರುತ್ತದೆ ಎಂದು ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯರು ತಿಳಿಸಿದ್ದಾರೆ.

ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಕಾರವಾರ: ಕೆನರಾ ಬ್ಯಾಂಕ್ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಬ್ಯೂಟಿ ಪಾರ್ಲರ್ ಕುರಿತ 30 ದಿನಗಳ ಉಚಿತ ತರಬೇತಿಯು ನವೆಂಬರ್ 5 ರಿಂದ ಪ್ರಾರಂಭವಾಗಲಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವತಿಯರು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು 18 ರಿಂದ 45 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಬಿಪಿಎಲ್‌ಕಾರ್ಡ್ ಅಥವಾ ಜಾಬ್ ಕಾರ್ಡ್ ಹಾಗೂ ಆಧಾರ್ ಕಾರ್ಡ್‌ನ್ನು ಕಡ್ಡಾಯವಾಗಿ ಹೊಂದಿರುವ ಗ್ರಾಮೀಣ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಅರ್ಜಿ ಸಲ್ಲಿಸಲು ಅಕ್ಟೋಬರ್ 18 ಕೊನೆಯ ದಿನವಾಗಿದೆ. ತರಬೇತಿಯು ಕಡ್ಡಾಯವಾಗಿ ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣ ಪತ್ರವನ್ನು ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9380162042, 9740982585, 9113880324 ನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕ ರವಿಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ನಿರ್ವಹಣಾ ಕಾಮಗಾರಿ ಇರುವದರಿಂದ ಗೋಕರ್ಣ ವ್ಯಾಪ್ತಿಯ ಮಾದನಗೇರಿ, ಗೋಕರ್ಣ, ತದಡಿ, ಬಂಕಿಕೊಡ್ಲ, ಬಿಜ್ಜೂರು, ಗಂಗಾವಳಿ, ಓಂ ಬಿಚ್ ಫೀಡರಿನ ಎಲ್ಲಾ ಭಾಗಗಳಲ್ಲಿ ಹಾಗೂ 33/11 ಕೆ.ವಿ ಮರಾಕಲ್ ಉಪಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಇರುವುದರಿಂದ ಸಂತೆಗುಳಿ, ಕಲ್ಲಬ್ಬೆ, ಹೊದ್ಕೆ-ಶಿರೂರು, ಉಳ್ಳೂರುಮಠ, ಹೊದ್ಕೆ ಶಿರೂರು ಹಾಗೂ ಮೂರುರು ಫೀಡರಿನ ಭಾಗಗಳಲ್ಲಿ ಜಂಗಲ್ ಕಟ್ಟಿಂಗ್ ಇರುವುದರಿಂದ ಸೆ.25 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆಯೆಂದು ಹೆಸ್ಕಾಂ ತಿಳಿಸಿದೆ.

ಖಾತ್ರಿ ಕೆಲಸಗಾರನಿಗೆ ಬಂಗಾರದ ಪದಕ

ಬಡ ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಗೆ ಸಹಕಾರಿಯಾದ ನರೇಗಾ ಕೂಲಿ ಹಣ

ಕಾರವಾರ: ಸಮಾಜದ ಹಲವು ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿನ ಪ್ರತಿಭೆ ಬಡತನದ ಹೊಡೆತಕ್ಕೆ ಸಿಲುಕಿ ಕಮರಿದ ಉದಾಹರಣೆಗಳ ನಡುವೆಯೇ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಕಿರವತ್ತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೊಸಳ್ಳಿ ಗ್ರಾಮದ ಪ್ರತಿಭೆಯೊಂದು ಅನಾವರಣಗೊಂಡಿದೆ.

ರಾಮಚಂದ್ರ ಮತ್ತು ಬಮ್ಮವ್ವ ಖಿಲಾರಿ ಕುಟುಂಬ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಪಂ ನಿಂದ ಕೈಗೊಳ್ಳುವ ಸಮುದಾಯ ಅಭಿವೃದ್ಧಿ ಕಾಮಗಾರಿಗಳಲ್ಲಿ ನಿರಂತರವಾಗಿ ಕೂಲಿ ಕೆಲಸ ಮಾಡಿ, ನರೇಗಾ ಕೂಲಿ ಹಣದಲ್ಲಿಯೇ ಮಗ ಮಯೂರನಿಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸ ನೀಡಿಸಿದ್ದಾರೆ. ಸ್ನಾತಕೋತ್ತರ ವಿದ್ಯಾರ್ಥಿ ಮಯೂರನೂ ಸಹ ಕಾಲೇಜ್‌ನ ರಜೆ ಅವದಿಯಲ್ಲಿ ಗ್ರಾಮಕ್ಕೆ ಬಂದಾಗ ನರೇಗಾ ಕೂಲಿ ಕೆಲಸ ನಿರ್ವಹಿಸುವ ಮೂಲಕ ಉತ್ತಮ ಅಧ್ಯಯನ ನಡೆಸಿದ್ದಾನೆ. ಪ್ರಸ್ತುತ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಡೆದ 74ನೇ ಘಟಿಕೋತ್ಸದಲ್ಲಿ ರಾಜ್ಯಶಾಸ್ತ್ರ ವಿಭಾಗದ ಸ್ನಾತಕೋತ್ತರ ಪದವಿಯಲ್ಲಿ ಏಳು ಚಿನ್ನದ ಪದಕ ಪಡೆದು ಶ್ರೇಷ್ಠ ಸಾಧನೆ ಮಾಡಿದ್ದಾರೆ.

ಅತ್ಯಂತ ಹಿಂದುಳಿದ ಸಮುದಾಯಕ್ಕೆ ಸೇರಿದ ರಾಮಚಂದ್ರ ಖಿಲಾರಿ ಕುಟುಂಬ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೆಲಸದ ಮೇಲೆ

ಅವಲಂಬಿತವಾಗಿದ್ದು, 2022 ರಿಂದ 2024ರ ವರೆಗೆ ನಿರಂತರವಾಗಿ ಕೂಲಿ ಕೆಲಸ ನಿರ್ವಹಿಸುತ್ತಿದೆ. ಅಲ್ಲದೇ ನರೇಗಾ ಕೂಲಿ ಹಣದಲ್ಲಿಯೇ ಮಗ ಮಯೂರನ ವಿದ್ಯಾಭ್ಯಾಸದ ಖರ್ಚು ವೆಚ್ಚ, ಮನೆಯ ನಿರ್ವಹಣೆ ಹೊಣೆಯನ್ನ ನಿಭಾಯಿಸಿಕೊಂಡು ಬರುತ್ತಿದೆ.

2022-23ನೇ ಸಾಲಿನಲ್ಲಿ 70 ದಿನ ಕೆಲಸ ಮಾಡಿ ಒಟ್ಟು 21630 ರೂ. ಕೂಲಿ, 2023-24ನೇ ಸಾಲಿನಲ್ಲಿ 97 ದಿನ ಕೂಲಿ ಕೆಲಸ ಮಾಡಿ ಒಟ್ಟು 30652 ರೂ ಕೂಲಿ ಹಾಗೂ 2024-25ನೇ ಸಾಲಿನಲ್ಲಿ ಈವರೆಗೆ 29 ದಿನ ಕೂಲಿ ಕೆಲಸ ಮಾಡಿ ಒಟ್ಟು 10121 ರೂ. ಕೂಲಿ ಹಣವನ್ನು ಪಡೆದುಕೊಂಡಿದೆ. ಒಟ್ಟಾರೆಯಾಗಿ ನರೇಗಾದಡಿ ಕಳೆದ 3 ವರ್ಷದಲ್ಲಿ 196 ದಿನ ಕೂಲಿ ಕೆಲಸ ಮಾಡಿ ಒಟ್ಟು 62403 ರೂಪಾಯಿ ಕೂಲಿ ಹಣ ಪಡೆದಿದೆ.

ನರೇಗಾ ಕೂಲಿ ಕೆಲಸದಿಂದ ಗಳಿಸಿದ ಈ ಹಣವನ್ನು ಮಗ ಮಯೂರನ ಸ್ನಾತಕೋತ್ತರ ವ್ಯಾಸಾಂಗಕ್ಕೆ ಬಳಸಿದ್ದು, ಅತ್ಯಂತ ಕಷ್ಟಕರ ಸಂದರ್ಭದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆ ನೆರವಾಗಿದೆ.

ಕಡು ಬಡತನದಲ್ಲಿಯೂ ಮಗನಿಗೆ ಧಾರವಾಡ ವಿಶ್ವವಿದ್ಯಾಲಯದಲ್ಲಿ ಓದಲು ಅನುಕೂಲ ಮಾಡಿಕೊಟ್ಟೆವು. ಮನೆಯ ಪರಿಸ್ಥಿತಿ ಅರಿತ ಮಗ ಕಾಲೇಜಿನ ರಜೆಯ ದಿನಗಳಲ್ಲಿ ಗ್ರಾಮಕ್ಕೆ ಬಂದಾಗ ಸ್ವತಃ ನರೇಗಾ ಕೂಲಿ ಕೆಲಸದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅದಲ್ಲದೇ ಕೆಲವು ಸಂದರ್ಭಗಳಲ್ಲಿ ಪೋಷಕರಿಗೂ ಸಹಾಯಕನಾಗಿ ಕೆಲಸ ಮಾಡಿದ್ದಾನೆ. ಮಗನ ಸಾಧನೆಗೆ ಬಡತನ, ಸಿರಿತನ ಅಡ್ಡಿಯಾಗಲಿಲ್ಲ. ಸಾಧಿಸುವ ಛಲ, ಆತ್ಮಸ್ಥೈರ್ಯ, ಪೋಷಕರ ಬೆಂಬಲದೊಂದಿಗೆ

ನಿರಂತರ ಕೂಲಿ ಕೆಲಸ

ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಪೂರಕವಾಗಿದೆ. ಹೊಸಳ್ಳಿ ಗ್ರಾಮದಲ್ಲಿ ರಾಮಚಂದ್ರ ಮತ್ತು ಬಮ್ಮವ್ವ ಖಿಲಾರಿ ದಂಪತಿ ಸೇರಿದಂತೆ ಎರಡು ಜನ ಗಂಡು ಮಕ್ಕಳನ್ನೊಳಗೊಂಡ ನಾಲ್ಕು ಜನರ ನಮ್ಮ ಕುಟುಂಬ ಸ್ವಂತ ಜಮೀನು ಇರದ ಕಾರಣ ಗ್ರಾಮ ಪಂಚಾಯತಿಯಿಂದ ನರೇಗಾದಡಿ ಕೈಗೊಂಡ ಸಮುದಾಯ ಅಭಿವೃದ್ಧಿ ಕಾಮಗಾರಿಗಳಲ್ಲಿ ನಿರಂತರವಾಗಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದೆ.

ಉತ್ತಮವಾಗಿ ಓದಿ ಗ್ರಾಮಕ್ಕೆ ಕೀರ್ತಿ ತಂದಿರುವುದಕ್ಕೆ ತುಂಬಾ ಖುಷಿಯಾಗಿದೆ ಎನ್ನುತ್ತಾರೆ ವಿದ್ಯಾರ್ಥಿಯ ತಂದೆ ರಾಮಚಂದ್ರ ಖಿಲಾರಿ.

ಮನೆಯಲ್ಲಿ ಬಡತ ತಾಂಡವಾಡುತ್ತಿದ್ದ ಕಾರಣಕ್ಕೆ ಮೊದಲಿಗೆ ಉನ್ನತ ಶಿಕ್ಷಣ ಪೂರೈಸುವ ಕುರಿತು ಆತಂಕ ಎದುರಾಗಿತ್ತು. ಆದರೆ ನರೇಗಾದಡಿ ಕೂಲಿ ಕೆಲಸ ಮಾಡಿ ನಿನ್ನ ಓದಿಸುತ್ತೇವೆ ಎಂಬ ಪೋಷಕರ ಬೆಂಬಲ ನನ್ನ ನೆಮ್ಮದಿಯ ಓದಿಗೆ ಉತ್ತೇಜನ ನೀಡಿತು. ನರೇಗಾದಡಿ ಸಿಗುವ ಕೂಲಿ ಕೆಲಸದಿಂದ ಪೋಷಕರು ನೆಮ್ಮದಿಯಿಂದ ಇದ್ದರು. ಹೀಗಾಗಿ ನಿರಾತಂಕವಾಗಿ ಅಭ್ಯಾಸ ಮಾಡಲು ಮಹಾತ್ಮ ಗಾಂಧಿ ನರೇಗಾ ಯೋಜನೆಯು ಆರ್ಥಿಕ ಹಾಗೂ ಮಾನಸಿಕವಾಗಿ ಧೈರ್ಯ ತುಂಬಿದರ ಪರಿಣಾಮ ಉತ್ತಮ ಸಾಧನೆ ಸಾಧ್ಯವಾಗಿದೆ ಎನ್ನುತ್ತಾರೆ ಸ್ನಾತಕೋತ್ತರ ವಿದ್ಯಾರ್ಥಿ ಮಯೂರ ಖಿಲಾರಿ.ತ್ರ

74ನೇ ಘಟಿಕೋತ್ಸವ ಸಮಾರಂಭದಲ್ಲಿ ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಸಚಿವರು ಹಾಗೂ ಸಮ ಕುಲಾಧಿಪತಿ ಡಾ. ಎಂ.ಸಿ. ಸುಧಾಕರ್ ರವರು ಬಡತನದಲ್ಲಿ ಅರಳಿದ ಪ್ರತಿಭಾವಂತ ವಿದ್ಯಾರ್ಥಿ ಮಯೂರ ಖಿಲಾರಿ ಅವರಿಗೆ ಏಳು ಚಿನ್ನದ ಪದಕ ಹಾಗೂ ಅಭಿನಂದನಾ ಪತ್ರ ಪ್ರದಾನ ಮಾಡಿ ಗೌರವಿಸಿದರು. ಈ ಸಂದರ್ಭದಲ್ಲಿ ಕವಿವಿ ಕುಲಪತಿ ಪ್ರೊ. ಕೆ.ಬಿ. ಗುಡಸಿ, ಪ್ರೊ. ಎಸ್. ಅಯ್ಯಪ್ಪನ್ ಅಧ್ಯಕ್ಷರು ಎನ್‌ಎ ಬಿಎಲ್ ಗುರ್ಗಾಂವ್, ಮಾಜಿ ಕಾರ್ಯದರ್ಶಿ ಡಿಎಆರ್‌ಇ ಡೈರೆಕ್ಟರ್ ಜನರಲ್ ಐಸಿಎಆರ್ ನವದೆಹಲಿ, ಕುಲಪತಿ ಕೇಂದ್ರೀಯ ಕೃಷಿ ವಿದ್ಯಾಲಯ, ಇಂಫಾಲ್ ಅಧ್ಯಕ್ಷರು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಬೆಂಗಳೂರು ಇವರು ಉಪಸ್ಥಿತರಿದ್ದರು.

ಸಿ.ಎಂ ರಾಜೀನಾಮೆಗೆ ಒತ್ತಾಯ; ಪ್ರತಿಭಟನೆ

ಹಾವೇರಿ: ಸಿ.ಎಂ ಸಿದ್ದರಾಮಯ್ಯ ರಾಜೀನಾಮೆ ನೀಡುವಂತೆ ಒತ್ತಾಯಿಸಿ ಜಿಲ್ಲಾ ಬಿಜೆಪಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಮಂಗಳವಾರ ಸಿ.ಎಂ ಪ್ರಾಸ್ಯೂಕೇಷನ್ ಆದೇಶ ಹೊರ ಬಂದ ಮೇಲೆ ನಗರದ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಪ್ ಬಿಜೆಪಿ ಯಿಂದ ಪ್ರತಿಭಟನೆ ನಡೆಸಿ ಮಾತನಾಡಿದ ಜಿಲ್ಲಾಧ್ಯಕ್ಷ ಅರುಣಕುಮಾರ ಪೂಜಾರ ಮಾತನಾಡಿ ನಿಮ್ಮ ಸರ್ಕಾರದಲ್ಲಿ ಆಗಿರುವಂತಹ ಹಣದ ವೈಪಲ್ಯವನ್ನು ಮತ್ತು ಭ್ರಷ್ಟಾಚಾರವನ್ನು ಈಗಾಗಲೇ ನಾಡಿನ ಜನತೆಗೆ ತಿಳಿದಿದೆ ನನ್ನದಲ್ಲ ನನ್ನ ಪತ್ನಿಯದು ಅನ್ನವದನ್ನು ಬಿಟ್ಟು ಎಲ್ಲರು ಸೇರಿ ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು ನಿಮಗೆ ಸೂಕ್ತ ಕಾನೂನಿನ ವಿರುದ್ದ ಹೋದರೆ ಮುಂದಿನ ದಿನಗಳಲ್ಲಿ ಪ್ರತಿ ಗ್ರಾಮ ಮಟ್ಟದಲ್ಲಿ ನಿಮ್ಮ ವಿರುದ್ದ ಹೋರಟವನ್ನು ಮಾಡಲಾಗುವುದು ಎಂದು ಎಚ್ಚರಿಕೆ ಎಂದು ನೀಡಿದರು.

ಮಾಜಿ ಶಾಸಕ ಶಿವರಾಜ ಸಜ್ಜನರ ಮಾತನಾಡಿ ಕಾನೂನು ವ್ಯವಸ್ಥೆಯನ್ನು ಗೌರವವಿದ್ದರೆ ಕಾನೂನಿಗೆ ತೆಲೆಭಾಗಿ ರಾಜೀನಾಮೆ ಕೊಡಬೇಕೆಂದು ಹೇಳಿದರು. ನಾನು ಹಗರಣದಲ್ಲಿ ಪಾತ್ರನಾಗಿಲ್ಲವೆಂದು ಸುಳ್ಳು ಭರವಸೆಯನ್ನು ನೀಡಿ ರಾಜ್ಯ ಜನತೆಯ ಕಣ್ಣಿಗೆ ಮಣ್ಣುರೆಚುವಂತ ಕೆಲಸವನ್ನು ಮಾಡುತ್ತಾ ಬಂದಿದ್ದಿರಿ ಈಗಾದರು ನಿಮ್ಮ ಸರ್ಕಾರ ಎಚ್ಚತ್ತುಗೊಂಡು ರಾಜೀನಾಮೆ ಕೊಡಬೇಕೆಂದು ಹೇಳಿದರು.

ಮಾಜಿ ಶಾಸಕರಾದ ವಿರುಪಾಕ್ಷಪ್ಪ ಬಳ್ಳಾರಿಯವರು ಮಾತನಾಡಿ ಮುಡಾ ಹಗರಣದ ರುವಾರಿಯಾದಂತಹ



ಸಿದ್ದರಾಮಯ್ಯ ನಿಮ್ಮ ಹೆಂಡತಿಯ ಹೆಸರಿನ್ನಲ್ಲಿ ಮಾಡಿದಂತ ಆಸ್ತಿಯನ್ನು ಜನತೆಯ ಮುಂದೆಯಿಡಲಾಗಿದೆ ನಿಮಗೇನಾದರು ನಾಡಿನ ಜವಾಬ್ದಾರಿ ಇದ್ದರೆ ತಕ್ಷಣವೆ ರಾಜೀನಾಮೆಯನ್ನು ಕೊಟ್ಟು ಕಾನೂನು ಸುವ್ಯವಸ್ಥೆಯನ್ನು ಕಾಪಾಡಿ ನ್ಯಾಯ ಒದಗಿಸಿಕೊಡಬೇಕು. ನೀವೇನಾದರು ರಾಜೀನಾಮೆ ಕೊಡದಿದ್ದರೆ ಇವತ್ತು ಜಿಲ್ಲಾದ್ಯಾಂತ ಪ್ರತಿಭಟನೆ ಕೈಗೊಂಡಿದ್ದೇವೆ ನಾಳೇ ಮುಂಬರುವ ದಿನಗಳಲ್ಲಿ ತಾಲೂಕಮಟ್ಟದಲ್ಲಿ ಪ್ರತಿ ಗ್ರಮದಲ್ಲಿ ಸಹಿತ ನಿಮ್ಮ ಪ್ರತಿಭಟನೆ ಮಾಡಲಾಗುವುದು ಎಚ್ಚರಿಕೆ ಎಂದು ಹೇಳಿದರು.

ನಿಕಟಪೂರ್ವ ಜಿಲ್ಲಾಧ್ಯಕ್ಷರಾದ ಸಿದ್ದರಾಜ ಕಲಕೋಟಿ ಯವರು ಮಾತನಾಡಿ ರಾಜ್ಯದಲ್ಲಿ ಕಾಂಗ್ರೆಸ್ ಬಂದ ಮೇಲೆ ಜನರಿಗೆ ಎನಾದರು ಒಂದು ತೊಂದರೆ ಉಂಡು ಮಾಡುತ್ತಾ ಬಂದಿದೆ ಎಸ್.ಸಿ. ಎಸ್.ಟಿ ಹಗರಣ, ಮೂಡಾ ಹಗರಣವನ್ನು ಮಾಡಿ ನಾಡಿನ ಜನತೆಗೆ ಅನ್ಯವನ್ನು ಮಾಡುತ್ತಾ ಬಂದಿದೆ ಮಾನ್ಯ ಸಿದ್ದರಾಮಯ್ಯನವರೇ ನೀವು ಈ ಹಗರಣದಲ್ಲಿ ನೇರವಾಗಿ ಅಪಾಧಿರಾಗಿದ್ದಿರಿ ತಪ್ಪಿಸಿಕೊಳ್ಳಲು ಯಾವುದೇ ದಾರಿ ಇಲ್ಲ ಆದ ಕಾರಣ ತಕ್ಷಣವೇ ರಾಜಿನಾಮೆ ಕೊಡಬೇಕು. ಸುಳ್ಳು ಆಸ್ವಾಶನೆಯನ್ನು ಜನರಿಗೆ ಹೇಳುವದನ್ನು ಮತ್ತು ರಾಜ್ಯ ಪಾಲರ ಹೇಳಿಕೆಯನ್ನು ವಿರೋಧಿಸುವುದನ್ನು ನಿಲ್ಲಿಸಿ ನೀವು ಮಾಡಿದ ತಪ್ಪನ್ನು ಒಪ್ಪಿಕೊಂಡು ರಾಜೀನಾಮೆ ಕೊಡಬೇಕೆಂದು ಹೇಳದರು.

ರಾಜ್ಯ ಉಪಾಧ್ಯಕ್ಷರಾದ ಡಾ.ಬಸವರಾಜ ಕೇಲಗಾರ, ರಾಜ್ಯ ಎಸ್.ಟಿ. ಮೋರ್ಚಾ ಸದಸ್ಯರಾದ ಎನ್. ಎಂ. ಈಟೇರ,ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನಂಜುಂಡೇಶ ಕಳ್ಳೇರ, ಡಾ. ಸಂತೋಷ ಆಲದಕಟ್ಟಿ, ಮಂಜುನಾಥ ಗಾಣಿಗೇರ, ಜಿಲ್ಲಾ ಪದಾಧಿಕಾರಿಗಳು, ಸ್ಥಳಿಯ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಗ್ರಾಮೀಣ ಬಿಜೆಪಿ ಘಟಕಾಧ್ಯಕ್ಷೆಗೆ ಶಿಕ್ಷೆ

ಭ್ರಷ್ಟಾಚಾರ ಪ್ರಕರಣದಲ್ಲಿ ಉಷಾಗೆ 1 ವರ್ಷ ಜೈಲು

ಶಿರಸಿ: ತಾಲೂಕಿನ ಗ್ರಾಮೀಣ ಬಿಜೆಪಿ ಘಟಕದ ಅಧ್ಯಕ್ಷೆ ಹಾಗೂ ಮಾಜಿ ಜಿಪಂ ಸದಸ್ಯೆ ಉಷಾ ಹೆಗಡೆ ಅವರಿಗೆ ಭ್ರಷ್ಟಾಚಾರದ ಪ್ರಕರಣದಲ್ಲಿ ಕಾರವಾರದ ಲೋಕಾಯುಕ್ತ ನ್ಯಾಯಾಲಯ ಒಂದು ವರ್ಷಗಳ ಕಠಿಣ ಸಜೆ ಹಾಗೂ ರೂ. 5 ಸಾವಿರ ದಂಡ ವಿಧಿಸಿದೆ. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ವಿಜಯ ಕುಮಾರ ಅವರು ಈ ತೀರ್ಪು ನೀಡಿದ್ದಾರೆ.

ಉಷಾ ಹೆಗಡೆ ಅವರು ಶಿರಸಿ ತಾಲೂಕಿನ ಬದನಗೋಡ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗುವ ಮೊದಲು ಶಿರಸಿ ತಾಲೂಕಿನ ಶ್ರೀನಗರ ಅಂಗನವಾಡಿಯ ಕಾರ್ಯಕರ್ತೆ ಯಾಗಿದ್ದರು.

ಈ ಮಧ್ಯೆ ಜಿ.ಪಂ. ಚುನಾವಣೆಗೆ ಬಿಜೆಪಿಯಿಂದ ಸ್ಪರ್ಧಿಸಿ ಗೆಲುವನ್ನು ಸಾಧಿಸಿದ್ದರು. ಆದರೂ ತಮ್ಮ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ರಾಜೀನಾಮೆ ನೀಡದೆ ಜಿಲ್ಲಾ ಪಂಚಾಯತ್ ಹಾಗೂ ಅಂಗನವಾಡಿ ಎರಡೂ ಕಡೆಯಿಂದ ಸಂಬಳ ಪಡೆಯುತ್ತಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾ ಗಿತ್ತು. ಇದಕ್ಕೆ ಸಂಬಂಧಿಸಿ ಉಷಾ ಹೆಗಡೆಯನ್ನು ದೋಷಿ ಎಂದು ತೀರ್ಮಾನಿಸಿ ಆದೇಶ ನೀಡಲಾಗಿದೆ.

ಬಿಜೆಪಿಗೆ ಮುಜುಗರ

ಭ್ರಷ್ಟಾಚಾರ ಆರೋಪದಲ್ಲಿ ಶಿಕ್ಷೆ ಆಗಿರುವ ಉಷಾ ಹೆಗಡೆ ಬಿಜೆಪಿ ಗ್ರಾಮೀಣ ಘಟಕದ ಅಧ್ಯಕ್ಷೆಯೂ ಆಗಿರುವ ಕಾರಣ ಬಿಜೆಪಿಗೆ ಮುಜುಗರ ತಂದಿದೆ. ಕಾಂಗ್ರೆಸ್ ವಿರುದ್ಧ ಸದಾ ಆರೋಪ ಮಾಡುವ ಬಿಜೆಪಿಗೆ ಸ್ಥಳೀಯವಾಗಿ ಇದು ಹೊಸ ಸಮಸ್ಯೆಯಾಗಿದೆ. ಇತ್ತೀಚಿಗಷ್ಟೆ ಉಷಾ ಹೆಗಡೆ ಅಧ್ಯಕ್ಷೆಯಾಗಿ ನೇಮಕಗೊಂಡಿದ್ದರು. ಇನ್ನು ಉಷಾ ಹೆಗಡೆ ಬದನಗೋಡ ಬಳಿಕ ದೊಡ್ನಳ್ಳಿ ಕ್ಷೇತ್ರದಿಂದಲೂ ಜಿಪಂ ಸದಸ್ಯೆಯಾಗಿ ಆಯ್ಕೆಯಾಗಿದ್ದರು.

ಪೌಷ್ಟಿಕ ಆಹಾರದ ಅರಿವಿರಲಿ

ಯಲ್ಲಾಪುರ: ಸದೃಢ ಮಗು ದೇಶದ ಆಸ್ತಿ. ಆ ತಾಯಿ ಮಗುವಿಗೆ ಯಾವ ರೀತಿ ಪೌಷ್ಟಿಕ ಆಹಾರ ಕೊಡಬೇಕು, ಹಾಗೂ ಪಾಲಿಸಬೇಕು ಎಂಬ ಸಾಮಾನ್ಯ ಜ್ಞಾನ ಪ್ರತಿಯೊಂದು ಕುಟುಂಬಕ್ಕೂ ದೊರೆಯಬೇಕು ಎಂಬುದೇ ರಾಷ್ಟ್ರೀಯ ಪೌಷ್ಟಿಕ ಆಹಾರ ದಿನ ದ ಉದ್ದೇಶ ವಾಗಿದೆ ಎಂದು ಸಿವಿಲ್ ನ್ಯಾಯಾಧೀಶೆ ಲಕ್ಷ್ಮಿಬಾಯಿ ಪಾಟೀಲ ಹೇಳಿದರು.

ಅವರು ಪಟ್ಟಣದ ಗಣಪತಿ ಗಲ್ಲಿ ಅಂಗನವಾಡಿ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಶು ಅಭಿವೃದ್ಧಿ ಮತ್ತುವಿವಿಧ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ನಡೆದ ಪೋಷಣಾಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿರೂಪಾಕ್ಷ ಗೌಡ ಪಾಟೀಲ ಮಾತನಾಡಿ, ಗರ್ಭಿಣಿ ಮಹಿಳೆ ಮತ್ತು ಮಗುವಿನ ಪರಿಪೂರ್ಣ ಆರೋಗ್ಯಕ್ಕಾಗಿ ಮತ್ತು ಅಪೌಷ್ಠಿಕತೆಯನ್ನು ನಿವಾರಿಸಲು ಪೌಷ್ಠಿಕ ಆಹಾರ ಸೇವನೆಯು ಅತ್ಯಗತ್ಯವಾಗಿದ್ದು, ರಾಸಾಯನಿಕ ಮುಕ್ತ ಪದಾರ್ಥಗಳಿಂದ ತಯಾರಿಸಿದ ಪೌಷ್ಠಿಕ ಆಹಾರ ಪದಾರ್ಥಗಳನ್ನು ಸೇವಿಸುವದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಅಭಿವೃದ್ಧಿ ಯೋಜನಾಧಿಕಾರಿ ಶ್ರೀದೇವಿ ಪಾಟೀಲ ಮಾತನಾಡಿದರು. ವಕೀಲರ ಸಂಘದ ಅಧ್ಯಕ್ಷೆ ಸರಸ್ವತಿ ಭಟ್ ಪ್ರಾರ್ಥಿಸಿದರು.

ಮಾದಕ ವಸ್ತುಗಳ ಅರಿವು ಅಗತ್ಯ: ಜಿಲ್ಲಾಧಿಕಾರಿ

ಹಾವೇರಿ: ದೇಶದಲ್ಲಿ ತಂಬಾಕು ಹಾಗೂ ಇತರೆ ಮಾದಕ ವಸ್ತುಗಳ ಸೇವನೆಯಿಂದ ಸಾವುನೋವುಗಳು ಉಂಟಾಗುತ್ತಿದ್ದು, ಮಾದಕ ವಸ್ತುಗಳ ದುಷ್ಪಾರಿಣಾಮಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದು ಅತ್ಯಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ ಹೇಳಿದರು.

ನಗರದ ಮೈಲಾರ ಮಾಹಾದೇವಪ್ಪ ವೃತ್ತದಲ್ಲಿ ಮಂಗಳವಾರ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಪದವಿ ಪೂರ್ವ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ, ಇನ್ನರ ವೀಲ್ ಕ್ಲಬ್ ಸಹಯೋಗದಲ್ಲಿ ಆಯೋಜಿಸಲಾದ ತಂಬಾಕು ಮುಕ್ತ ಯುವ ಅಭಿಯಾನ-2.0 ಜಾಥಾ ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿ ಮಾತನಾಡಿದ ಅವರು, ಸಿಗರೇಟ್ ಮತ್ತು ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮಗಳು ಉಂಟಾಗುತ್ತವೆ ಎಂದರು.

ಗ್ಲೋಬಲ್ ಅಡಲ್ಟ್ ಟೊಬ್ಯಾಕೋ ಸರ್ವೆ ಹಾಗೂ ನ್ಯಾಷನಲ್ ಫ್ಯಾಮಿಲಿ ಹೆಲ್ತ್ ಸರ್ವೆ ಪ್ರಕಾರ 2016 ರಲ್ಲಿ ದೇಶದಲ್ಲಿ ಪ್ರತಿಶತ 30 ರಷ್ಟು ಜನರು ಸಿಗರೇಟ್ ಹಾಗೂ ಇನ್ನಿತರ ಮಾದಕ ವಸ್ತುಗಳ ಸೇವೆನೆ ಮಾಡುತ್ತಿದ್ದು, ಇದು ತುಂಬಾ ಅಪಾಯಕಾರಿ ಸೂಚನೆಯಾಗಿದೆ. ಜಗತ್ತಿನಲ್ಲಿ ಸುಮಾರು 80 ಲಕ್ಷ ಜನ ಪ್ರತಿ ವರ್ಷ ತಂಬಾಕು ಉತ್ಪನ್ನಗಳ ಸೇವನೆಯಿಂದ ಮರಣಹೊಂದುತ್ತಿದ್ದಾರೆ. ತಂಬಾಕು ಉತ್ಪನ್ನಗಳ ಸೇವನೆ ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ದೇಶದಲ್ಲಿ ತಂಬಾಕು ಮುಕ್ತ ದೇಶವನ್ನಾಗಿ ಮಾಡಲು 2003 ರಲ್ಲಿ COTPA ಕಾಯ್ದೆ ಹಾಗೂ ನ್ಯಾಷನಲ್

ಟೊಬ್ಯಾಕೋ ಕಂಟ್ರೋಲ್ ಪ್ರೋಗ್ರಾಮ್ ಈ ಎರಡು ಕಾಯ್ದೆಗಳ ಮೂಲಕ ದೇಶದಲ್ಲಿ ತಂಬಾಕು ಸೇವನೆಯನ್ನು ನಿಯಂತ್ರಿಸಲು ಯೋಜನೆ ರೂಪಿಸಲಾಗಿದೆ ಎಂದರು.

ಕೇವಲ ಕಾಯ್ದೆಗಳಿಂದ ಮಾದಕ ವಸ್ತುಗಳ ಸೇವನೆ ತಡೆಗಟ್ಟಲಾಗದು, ಜೊತೆಗೆ ಕಾಲ ಕಾಲಕ್ಕೆ ಮಾದಕ ವಸ್ತುಗಳ ಬಳಕೆಯ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಹೇಳಿದರು.

ತಂಬಾಕು ಮುಕ್ತ ಯುವ ಅಭಿಯಾನ -2.0 ಜಾಥಾ ಮೈಲಾರ ಮಾಹದೇವಪ್ಪ ವೃತ್ತದಿಂದ ಸಾಗಿ ನಗರದ ಪ್ರಮುಖ ಬಿದಿಗಳಲ್ಲಿ ಸಂಚರಿಸಿ ಹೊಸಮನಿ ಸಿದ್ದಪ ವೃತ್ತದಲ್ಲಿ ಮಾನವ ಸರಪಳಿ ರಚನೆಯೊಂದಿಗೆ ಕೊನೆಗೊಂಡಿತು.

ಜಿ.ಪಂ.ಉಪ ಕಾರ್ಯದರ್ಶಿ ಡಾ.ಎಸ್. ರಂಗಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಾಜೇಶ ಸುರಗಿಹಳ್ಳಿ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಹಾಗೂ ತಂಬಾಕು ನಿಯಂತ್ರಣಾಧಿಕಾರಿ ಡಾ.ಜಗದೀಶ ಪಾಟೀಲ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಾ. ಉಮೇಶಪ್ಪ ಎಚ್., ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸುರೇಶ ಹುಗ್ಗಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಲತಾ, ತಾಲೂಕಾ ಆರೋಗ್ಯಾಧಿಕಾರಿ ಡಾ.ಪ್ರಭಾಕರ ಕುಂದೂರ ಹಾಗೂ ಇನ್ನ ವ್ಹೀಲ್ ಕ್ಲಬ್ ಅಧ್ಯಕ್ಷೆ ಪ್ರಭಾವತಿ ಹಾವನೂರ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿ, ಉಪನ್ಯಾಸಕರು, ಆಶಾ ಕಾರ್ಯ ಕರ್ತೆಯರು ಉಪಸ್ಥಿತರಿದ್ದರು.

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹರಪನಹಳ್ಳಿ.
ಆರ್.ಎ. ನಂ.05/2020
ಅಪೀಲುದಾರರು: ಶ್ರೀ ಉಜ್ಜಿನಪ್ಪ ಮತ್ತು ಇತರರು
ವಿರುದ್ಧ
ಎದುರುದಾರರು:
ಶ್ರೀಮತಿ ಕುಂಬಾರ ಗಂಗಮ್ಮ ಮತ್ತು ಇತರರು.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಈ ಮೂಲಕ ಎದುರುದಾರ ನಂ.ಆರ್ 8(ಬಿ) ರವರಾದ ಶ್ರೀಮತಿ ಯಲ್ಲಮ್ಮ ತಂದೆ ಲೇಟ್ ಗುರುಪಾದಪ್ಪ, ವಯಸ್ಸು 40 ವರ್ಷ, ವೃತ್ತಿ: ಮನೆ ಕೆಲಸ. ಎದುರುದಾರ ನಂ.ಆರ್ 8(ಸಿ) ರವರಾದ ಶ್ರೀಮತಿ ಅನಿತ ತಂದೆ ಲೇಟ್ ಗುರುಪಾದಪ್ಪ, ವಯಸ್ಸು 38 ವರ್ಷ, ವೃತ್ತಿ: ಮನೆ ಕೆಲಸ, ಎದುರುದಾರ ನಂ.ಆರ್ 8(ಡಿ) ರವರಾದ ಶ್ರೀಮತಿ ಸುನೀತ ತಂದೆ ಲೇಟ್ ಗುರುಪಾದಪ್ಪ, ವಯಸ್ಸು 36 ವರ್ಷ, ವೃತ್ತಿ: ಮನೆ ಕೆಲಸ, ಎದುರುದಾರ ನಂ.ಆರ್ 8(ಇ) ರವರಾದ ಶ್ರೀಮತಿ ಪುಷ್ಪಾ ತಂದೆ ಲೇಟ್ ಗುರುಪಾದಪ್ಪ, ವಯಸ್ಸು 34 ವರ್ಷ, ವೃತ್ತಿ: ಮನೆ ಕೆಲಸ, ಎದುರುದಾರ ನಂ.ಆರ್ 8(ಎಫ್) ರವರಾದ ಶ್ರೀಮತಿ ಕರಿಬಸಮ್ಮ ತಂದೆ ಲೇಟ್ ಗುರುಪಾದಪ್ಪ, ವಯಸ್ಸು 32 ವರ್ಷ, ವೃತ್ತಿ: ಮನೆ ಕೆಲಸ, ಎಲ್ಲರೂ ವಾಸ: ಶಿಂಗ್ರಿಹಳ್ಳಿ ಗ್ರಾಮ ಮತ್ತು ಅಂಚೆ, ಹರಪನಹಳ್ಳಿ ತಾಲ್ಲೂಕು ವಿಜಯನಗರ ಜಿಲ್ಲೆ ನಿವಾಸಿಯಾದ ನಿಮ್ಮ ವಿರುದ್ಧ ಅಪೀಲುದಾರರಾದ ಶ್ರೀ ಉಜ್ಜಿನಪ್ಪ ಮತ್ತು ಇತರರು ಸೇರಿ ಮಾನ್ಯ ಗೌರವಾನ್ವಿತ ಹರಪನಹಳ್ಳಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಆರ್.ಎ. ನಂ. 05/2020 ರ ಅಪೀಲನ್ನು ಸಲ್ಲಿಸಿದ್ದು ಸದರಿ ಅರ್ಜಿಗೆ ಸಂಬಂಧಿಸಿದಂತೆ ದಾವಾ ಸಮನ್ಸು/ನೋಟೀಸ್ ಸಾಮಾನ್ಯ ಸ್ವರೂಪದಲ್ಲಿ ಹಾಗೂ ನೋಂದಾಯಿತ ಅಂಚೆಯ ಮೂಲಕ ನಿಮಗೆ ಕಳಿಸಿದರು ಸಹ ಅವು ಜಾರಿಯಾಗದ ಕಾರಣ ಈ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುತ್ತದೆ. ದಾವೆಯು ದಿನಾಂಕ: 15.11.2024 ರಂದು ಬೆಳಿಗ್ಗೆ 11-00 ಗಂಟೆಗೆ ಮುದ್ದತ್ತು ಇರುತ್ತದೆ. ಕಾರಣ ನ್ಯಾಯಾಲಯಕ್ಕೆ ಖುದ್ದಾಗಿ ಹಾಜರಾಗತಕ್ಕದ್ದು. ಒಂದು ವೇಳೆ ಈ ಮೇಲೆ ತಿಳಿಸಿದ ದಿನದಂದು ನ್ಯಾಯಾಲಯಕ್ಕೆ ಹಾಜರಾಗಲು ನೀವು ತಪ್ಪಿದಲ್ಲಿ, ನಿಮ್ಮ ಗೈರು ಹಾಜರಿಯಲ್ಲಿ ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.
2024ನೇ ಸೆಪ್ಟೆಂಬರ್ ತಿಂಗಳಿನ 24ನೇ ತಾರೀಖಿನಂದು ನ್ಯಾಯಾಲಯದ ಮೊಹರಿನೊಂದಿಗೆ ಈ ನೋಟಿಸ್ ಕೊಡಲಾಗಿದೆ.
ಶಿರಸ್ತೇದಾರರು
ಹಿರಿಯ ಸಿವಿಲ್ ಮತ್ತು ಜಡ್ಜ್
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ.
ಅಪೀಲುದಾರರ ಪರ ವಕೀಲರು: **ವಿ.ಜಿ. ಪ್ರಕಾಶ ಗೌಡ.**
ಸ್ಥಳ: ಹರಪನಹಳ್ಳಿ ದಿನಾಂಕ:24.09.2024

ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.279/2024
ಅರ್ಜಿದಾಳು : ಶ್ರೀಮತಿ ಗೌರಿಬಾಯಿ ಗಂಡ ಲೇಟ್ ಮಲ್ಲೇಶ ನಾಯ್ಕ , ವಯಸ್ಸು 65 ವರ್ಷ, ವೃತ್ತಿ: ವ್ಯವಸಾಯ , ವಾಸ: ಬೆಂಡಿಗೇರಿ ಸಣ್ಣ ತಾಂಡ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು : .ಮಾನ್ಯ ತಹಶಿಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು,ತಾಲೂಕು ಕಛೇರಿ ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಅರ್ಜಿದಾರಳ ಗಂಡನಾದ ಮಲ್ಲೇಶನಾಯ್ಕ ತಂದೆ ಲೇಟ್ ಹೂನ್ಯಾನಾಯ್ಕ, ಇವರು ದಿನಾಂಕ:29.04.2022 ರಂದು ಹರಪನಹಳ್ಳಿ ತಾಲೂಕು,ಬೆಂಡಿಗೇರಿ ತಾಂಡದ ಅರ್ಜಿದಾರಳ ತಮ್ಮ ಸ್ವ-ಗೃಹದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 26.10.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11-00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.
ನ್ಯಾಯಾಲಯದ ಆದೇಶದ ಮೇರೆಗೆ
ಹಿರಿಯ ಶಿರಸ್ತೇದಾರರು
ಮಾನ್ಯ ,ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರರ ಪರ ವಕೀಲರು
ಶ್ರೀ ನಾಗರಾಜ ನಾಯ್ಕ.ಸಿ.
ಸ್ಥಳ: ಹರಪನಹಳ್ಳಿ
ದಿನಾಂಕ: 23/09/2024

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.286/2024
ಅರ್ಜಿದಾರಳು : ಶ್ರೀಮತಿ ಕರಿಬಸಮ್ಮ ಗಂಡ ಅಂಜಿನಪ್ಪ, ವಯಸ್ಸು 33 ವರ್ಷ, ವೃತ್ತಿ: ವ್ಯವಸಾಯ, ವಾಸ: 12ನೇ ವಾರ್ಡ್, ಕುರುಬಗೇರಿ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು: ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ, ಕಾರ್ಯಾಲಯ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಅರ್ಜಿದಾರಳ ಅಜ್ಜನಾದ ಮುದ್ದಿ ಬಸಪ್ಪ ತಂದೆ ಲೇಟ್ ಭರಮಪ್ಪ ಇವರು ದಿನಾಂಕ: 25.03.1979 ರಂದು ಹರಪನಹಳ್ಳಿ ಪಟ್ಟಣದ 12ನೇ ವಾರ್ಡ್ ಕುರುಬಗೇರಿಯಲ್ಲಿ ಅರ್ಜಿದಾರನ ತಮ್ಮ ಸ್ವ-ಗೃಹದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 07.12.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11-00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ ಹರಪನಹಳ್ಳಿ
ಅರ್ಜಿದಾರರ ಪರ ವಕೀಲರು
ಶ್ರೀ ಕೆ. ಸುರೇಶ
ಸ್ಥಳ: ಹರಪನಹಳ್ಳಿ
ದಿನಾಂಕ: 20/09/2024

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.515/2024
ಅರ್ಜಿದಾರರು : ಶ್ರೀ ನಾಗರಾಜ ಜಿ. ತಂದೆ ಲೇಟ್ ಗುಡ್ಡಿಹಳ್ಳಿ ಹನುಮಪ್ಪ, ವಯಸ್ಸು 38 ವರ್ಷ, ವೃತ್ತಿ : ವ್ಯವಸಾಯ, ವಾಸ: ಜಿಟ್ಟಿನಕಟ್ಟಿ ಗ್ರಾಮ, ತಲವಾಗಲು ಅಂಚೆ. ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು : ಮಾನ್ಯ ತಹಶಿಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ತಾಲೂಕು ಕಛೇರಿ ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಅರ್ಜಿದಾರನ ತಂದೆಯಾದ ಗುಡಿಹಳ್ಳಿ ಹನುಮಪ್ಪ ತಂದೆ ಲೇಟ್ ಸಣ್ಣ ಮಲ್ಲಪ್ಪ ಇವರು ದಿನಾಂಕ:17.06.1992 ರಂದು ಹರಪನಹಳ್ಳಿ ತಾಲೂಕು, ಜಿಟ್ಟಿನಕಟ್ಟಿ ಗ್ರಾಮದಲ್ಲಿ ಅರ್ಜಿದಾರನ ತಮ್ಮ ಸ್ವ-ಗೃಹದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 19.10.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11-00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ ಹರಪನಹಳ್ಳಿ
ಅರ್ಜಿದಾರರ ಪರ ವಕೀಲರು
ಶ್ರೀ ಹನುಮಂತಪ್ಪ. ಸಿ
ಸ್ಥಳ: ಹರಪನಹಳ್ಳಿ
ದಿನಾಂಕ: 23/09/2024

ಗೌರವಾನ್ವಿತ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹೊಸಪೇಟೆ.
ಆರ್.ಎ.ನಂ.5048/2023
ಅಪಿಲುದಾರರು: ಶ್ರೀ ಕೊಟ್ರೇಶಪ್ಪ ಮತ್ತೊಬ್ಬರು
ವಿರುದ್ಧ
ಎದುರುದಾರರು: ದ್ರಾಕ್ಷಯಣಮ್ಮ ಮತ್ತು ಇತರರು
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಈ ಮೇಲಿನ ಅಪೀಲು ಪ್ರಕರಣದಲ್ಲಿ ಶ್ರೀ ಕೊಟ್ರೇಶಪ್ಪ ತಂದೆ ದಿ|| ಸಂಗಪ್ಪ ವಯಸ್ಸು 68 ವರ್ಷ, ಮತ್ತು ಶ್ರೀ ಸಂಗಮೇಶ ತಂದೆ ಕೊಟ್ರೇಶಪ್ಪ, ವಯಸ್ಸು 31 ವರ್ಷ, ಇಬ್ಬರ ವಾಸ-ಗುಂಡಗತ್ತಿ ಗ್ರಾಮ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲಾ, ಆದ ಇವರು ಅಸಲು ದಾವಾ ನಂಬರ್ -28/2011ರ ವಜಾ ಆದೇಶದಲ್ಲಿಯ ದಾವಾದಲ್ಲಿಯ ದಾವಾಸ್ತಿಗಳಾದ ಅನುಕ್ರಮ ಸಂಖ್ಯೆ- 13 ಮತ್ತು 15ರ ದಾವಾಸ್ತಿಗಳ ಮೇಲೆ ದಿನಾಂಕ: 17-12-2022 ರಂದು ಹೆಚ್ಚುವರಿ ವಿವಾದಾಂಶಗಳಿಗೆ ಸಂಬಂಧಿಸಿ ನಕರಾತ್ಮಕವಾಗಿ ಮಾಡಿರುವ ಆದೇಶದ ವಿರುದ್ಧ ಸಿ.ಪಿ.ಸಿ ಕ್ರಮಾದೇಶ 41 ನಿಯಮ 1(22)ರ ಪ್ರಕಾರ3ನೇಎದುರುದಾರನಾದ ಶ್ರೀ ಚನ್ನಬಸವನಗೌಡ ತಂದೆ ದಿ|| ನಿಂಗನಗೌಡ, ವಯಸ್ಸು 56 ವರ್ಷ, ವಾಸ:-ಗುಂಡಗತ್ತಿ ಗ್ರಾಮ, ಹರಪನಹಳ್ಳಿ ತಾಲ್ಲೂಕು. ವಿಜಯನಗರ ಜಿಲ್ಲೆ. ಇವರಿಗೆ ನ್ಯಾಯಾಲಯದಿಂದ ಹಲವಾರು ಬಾರಿ ನೋಟಿಸ್ ನೀಡಿದರೂ ಸಹ ಜಾರಿಯಾಗಿರುವುದಿಲ್ಲ, ಆದ್ದರಿಂದ ನೀವು ದಿನಾಂಕ: 14-10-2024 ಬೆಳಿಗ್ಗೆ 11 ಗಂಟೆಗೆ ಖುದ್ದಾಗಿ/ವಕೀಲರ ಮೂಲಕ ಹಾಜರಾಗತಕ್ಕದ್ದು, ಒಂದು ವೇಳೆ ಮೇಲೆ ತಿಳಿಸಿದ ದಿನಾಂಕದಂದು ವಿಚಾರಣೆ ಸಂಬಂಧವಾಗಿ ನ್ಯಾಯಾಲಯಕ್ಕೆ ಹಾಜರಾಗಲು ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಅಪೀಲು ಪ್ರಕರಣವನ್ನು ಏಕ ಪಕ್ಷಿಯವಾಗಿ ತೀರ್ಮಾನಿಸಲಾಗುವುದು.
2024ನೇ ಇಸ್ವಿ ಸೆಪ್ಟೆಂಬರ್ ತಿಂಗಳು 23ನೇ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
3ನೇಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರವರ ನ್ಯಾಯಾಲಯ ಹೊಸಪೇಟೆ.
ಅಪೀಲುದಾರರ ಪರ ವಕೀಲರು: **(ಯು.ಕೊಟ್ರೇಶ)**

ನಿವೇಶನ ಹಂಚಿಕೆಗೆ ಠರಾವು

ಹಾನಗಲ್: ಸ್ಥಳೀಯ ಪುರಸಭೆ ವ್ಯಾಪ್ತಿಯಲ್ಲಿ ನಿವೇಶನ ರಹಿತರಿಗೆ ಹಂಚಿಕೆ ಮಾಡಲು ಲಭ್ಯವಿರುವ ಗಾಂವಠಾಣ ಜಮೀನು ಗುರುತಿಸಿ, ಸರ್ವೆ ಕಾರ್ಯ ಕೈಗೊಳ್ಳಲು ಇಲ್ಲಿನ ಪುರಸಭೆಯಲ್ಲಿ ಮಂಗಳವಾರ ಶಾಸಕ ಶ್ರೀನಿವಾಸ ಮಾನೆ ಅಧ್ಯಕ್ಷತೆಯಲ್ಲಿ ನಡೆದ ಆಶ್ರಯ ಸಮಿತಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಕಾಮನಹಳ್ಳಿ ಮತ್ತು ಬೈಚವಳ್ಳಿ ರಸ್ತೆ ಹಾಗೂ ತಾಲೂಕಾ ಕ್ರೀಡಾಂಗಣದ ಪಕ್ಕದಲ್ಲಿ ಲಭ್ಯವಿರುವ ಜಮೀನಿನ ಸರ್ವೆ ಕೈಗೊಳ್ಳಬೇಕು. ಕೆ.ಎಚ್.ಬಿ. ಅಥವಾ ಯಾವುದಾದರೂ ಇಲಾಖೆಗೆ ವಸತಿ ಯೋಜನೆಗಾಗಿ ವಿನ್ಯಾಸ ತಯಾರಿಸಲು ಸಭೆ ತೀರ್ಮಾನಿಸಿತು. ಮುಂದಿನ ಸಭೆಯೊಳಗೆ ಸರ್ವೆ ಕೈಗೊಂಡು ಅಗತ್ಯ ಮಾಹಿತಿ ಸಿದ್ಧಪಡಿಸುವಂತೆ ಶಾಸಕ ಮಾನೆ ಇದೇ ಸಂದರ್ಭದಲ್ಲಿ ಪ್ರಭಾರ ಮುಖ್ಯಾಧಿಕಾರಿ ಎನ್. ಎಸ್.ನಾಗನೂರ ಅವರಿಗೆ ಸೂಚಿಸಿದರು.

ನಿವೇಶನ ರಹಿತ 7 ಜನ ಪೌರಕಾರ್ಮಿಕರಿಗೆ ನವನಗರದ ರಿ.ಸ.ನಂ. 283/1 ಹಾಗೂ 283/3 ರಲ್ಲಿ ನಿವೇಶನ ಗುರುತಿಸಿ ಹಂಚಿಕೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ವಿವಿಧ ವಸತಿ ಯೋಜನೆಗಳ ಪ್ರಗತಿಯನ್ನು ಶ್ರೀನಿವಾಸ ಮಾನೆ ಪರಿಶೀಲಿಸಿದರು.

ತಹಸೀಲ್ದಾರ್ ರೇಣುಕಾ ಎಸ್., ಪುರಸಭೆ ಅಧ್ಯಕ್ಷೆ ಮಮತಾ ಆರೆಗೊಪ್ಪ, ಆಶ್ರಯ ಸಮಿತಿ ಸದಸ್ಯರಾದ ಮೇಘನಾ ಸುಲಾಖೆ, ನಿಯಾಜ್ ಸರ್ವಿಕೇರಿ, ವಿನಾಯಕ ಬಂಕನಾಳ, ಮಾಲತೇಶ ಕಾಳೇರ ಇದ್ದರು.

ಹಾನಗಲ್ ಪುರಸಭೆಯ ಆಶ್ರಯ ಸಮಿತಿಯ ಸಭೆ ಶಾಸಕ ಶ್ರೀನಿವಾಸ ಮಾನೆ ಅಧ್ಯಕ್ಷತೆಯಲ್ಲಿ ನಡೆಯಿತು.

ಸಮಾಚಾರ ಸಣ್ಣದಲ್ಲ

ಆಸ್ತಿಗಾಗಿ ಅಣ್ಣನಿಂದ ತಂಗಿಯ ಕೊಲೆ

ಗದಗ: ಆಸ್ತಿ ವಿಚಾರಕ್ಕೆ ಅಣ್ಣನಿಂದ ತಂಗಿಯನ್ನು ಭರ್ಬರವಾಗಿ ಕೊಲೆ ಮಾಡಿದ ಘಟನೆ, ಜಿಲ್ಲೆಯ ಮುಂಡರಗಿ ಪಟ್ಟಣದಲ್ಲಿ ನಡೆದಿದೆ. ಮುಂಡರಗಿ ಪಟ್ಟಣದ ಹೇಮರೆಡ್ಡಿ ಮಲ್ಲಮ್ಮ ಕಾಲೋನಿಯ ಮನೆಯಲ್ಲಿ ಈ ಘಟನೆ ನಡೆದಿದೆ. ಅಣ್ಣ ಈಶಪ್ಪ ಕ್ಯಾದಗಿಹಳ್ಳಿ ಎಂಬಾತನಿಂದ ಕೃತ್ಯ ನಡೆದಿದೆ. 32 ವರ್ಷದ ಕಾವ್ಯಾ ಅಲಿಯಾಸ್ ಖುಷಿತಾ ಮೃತ ಮಹಿಳೆ. ಈ ಮೊದಲೇ ಪ್ರಶಾಂತ್ ಹಡಪದ ಜೊತೆ ಮದುವೆಯಾಗಿತ್ತು. ನಂತರ ನಾಲ್ಕು ವರ್ಷದ ಹಿಂದೆ ಅನ್ಯಕೋಮಿನ ಯುವಕನ ಜೊತೆ ಮರು ಮದುವೆಯಾಗಿದ್ದಳು. ಇದರಿಂದ ಕುಟುಂಬಸ್ಥರು ಕೊಪಿತಗೊಂಡಿದ್ದರು. ಅನ್ಯಕೋಮಿನ ಯುವಕನ ಮಾತುಕೇಳಿ ಈಗ ಪಿತ್ರಾರ್ಜಿತ ಆಸ್ತಿಗಾಗಿ ಕಾವ್ಯಾ ಕೋರ್ಟ್ ಮೆಟ್ಟಿಲೇರಿದ್ದಳು ಎನ್ನಲಾಗಿದೆ. ಮನೆಗೆ ಬಂದು ತಂಗಿ ಕಾವ್ಯಾ ಜೊತೆ ಅಣ್ಣ ಈಶ್ವರಪ್ಪ ವಾಗ್ವಾದ ನಡೆಸಿದ್ದಾನೆ. ಕೇಸ್ ಹಿಂಪಡೆದುಕೊ ಅಂತ ಜಗಳ ಮಾಡಿದ್ದಾನೆ. ಆಗ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಜಗಳ ತೀವ್ರ ವಿಕೋಪಕ್ಕೆ ತಿರುಗಿ ತಂಗಿಗೆ ಎಲ್ಲೆಂದರಲ್ಲಿ ಚಾಕುವಿನಿಂದ ಮನಬಂದಂತೆ ಇರಿದು, ಕತ್ತು ಮೇಲೆ ಕಾಲಿಟ್ಟು ಉಸಿರು ಗಟ್ಟಿಸಿ ಕೊಲೆಮಾಡಿದ್ದಾನೆ. ಕೊಲೆ ಮಾಡಿ ತಾನೇ ಪೊಲೀಸರಿಗೆ ಶರಣಾದ ಅಣ್ಣ ಈಶಪ್ಪ ಕ್ಯಾದಗಿಹಳ್ಳಿ. ಮುಂಡರಗಿ ಪೊಲೀಸರು, ಪ್ರಬಾರಿ ಎಸ್.ಪಿ ಸುಂಕದ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದರು. ಈ ಕುರಿತು ಗದಗ ಜಿಲ್ಲೆಯ ಮುಂಡರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೇಷ್ಠ ವಿಜ್ಞಾನಿ ಪ್ರಶಸ್ತಿ ಪಡೆದದ್ದು, ಖುಷಿ ಇದೆ

ಧಾರವಾಡ: ಸುವರ್ಣ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ವಿದ್ಯಾಗಿರಿ, ಧಾರವಾಡ ಇಲ್ಲಿ ವಿದ್ಯಾಥಿಗಳಿಗೆ 3 ದಿನಗಳ ಒರಿಯನ್‌ಟೇಶನ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಮತ್ತು ವಿದ್ಯಾರ್ಥಿಗಳಿಗೆ ಮಾದರಿಯಾಗಲೆಂದು ಸಾಧನೆಗೈದ ಸಾಧಕರಿಗೆ ಆಹ್ವಾನಿಸಿ ಸನ್ಮಾನಿಸಲಾಯಿತು. ಕೇಂದ್ರ ರೇಷ್ಮೆ ಮಂಡಳಿ-ಕೇಂದ್ರೀಯ ರೇಷ್ಮೆ ತಾಂತ್ರಿಕ ಸಂಶೋಧನಾ ಸಂಸ್ಥೆ, ಬೆಂಗಳೂರಿನ ಹಿರಿಯ ವಿಜ್ಞಾನಿ ಡಾ. ಉದಯ ಜವಳಿ -ಇವರು 2019-23 ರ ಅವಧಿಯಲ್ಲಿ ಅತ್ಯುತ್ತಮ ಸಾಧನೆಗಾಗಿ ಶ್ರೇಷ್ಠ ವಿಜ್ಞಾನಿ ಎಂದು ಪ್ರಶಸ್ತಿ ಪಡೆದಿದ್ದು, ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ, ಡಾ.ಉದಯ ಜವಳಿ, ಭಾರತದಲ್ಲಿ 7 ವರ್ಷಕ್ಕೊಮ್ಮೆ ನೀಡುವ ಶ್ರೇಷ್ಠ ವಿಜ್ಞಾನಿ ಪ್ರಶಸ್ತಿ ಪಡೆದ್ದದ್ದು, ನನಗೆ ತುಂಬಾ ಖುಷಿತಂದಿರುವ ವಿಷಯ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ವಿಶ್ವನಾಥ ಎಮ್. ಅಮರಶೆಟ್ಟಿ , ಕಾರ್ಯದರ್ಶಿಗಳಾದ ಸವಿತಾ ವಿ. ಅಮರಶೆಟ್ಟಿ, ಪ್ರಾಚಾರ್ಯರಾದ ರವಿಕುಮಾರ ಎಸ್. ಹಾಗೂ ಧಾರವಾಡ ಜಿಲ್ಲೆ ಟೆನ್ನಿಸ್ ಸಂಸ್ಥೆಯ ಕಾರ್ಯಕಾರಿ ಮಂಡಳಿ ಸದಸ್ಯರಾದ ಸುಭಾನಿ ಬಾವಾಖಾನ್, ಸುರೇಶ್ ಕುಲಕರ್ಣಿ, ಲಕ್ಷ್ಮಿಕಾಂತ ರೆಡ್ಡಿ ಹಾಗೂ ತರಬೇತಿದಾರರಾದ ಚೇತನ್ ಗಂಜಾಳಿ ಉಪಸ್ಥಿತರಿದ್ದರು.

ಅಣ್ಣಿಗೇರಿಯಲ್ಲಿ ಪೌರ ಕಾರ್ಮಿಕರ ಸೇವೆ ಅನನ್ಯ

ಅಣ್ಣಿಗೇರಿ: ಪೌರಾಡಳಿತ ನಿರ್ದೇಶಾಲಯ ಬೆಂಗಳೂರು, ಜಿಲ್ಲಾಡಳಿತ, ನಗಾರಾಭಿವೃದ್ಧಿ ಕೋಶ ಮತ್ತು ಸ್ಥಳೀಯ ಪುರಸಭೆ ಕಾರ್ಯಾಲಯ ಇವುಗಳ ಆಶ್ರಯದಲ್ಲಿ ಆದಿಕವಿ ಪಂಪ ಭವನದಲ್ಲಿ, ಪೌರ ಕಾರ್ಮಿಕರ ದಿನಾಚರಣೆ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀ ಶಿವುಕುಮಾರ ಸ್ವಾಮಿಗಳು, ದಾಸೋಹ ಮಠ ಮನಗಳ ಸ್ವಚ್ಚತೆ ಇರದವನು ಮನೆಯ ಸ್ವಚ್ಚತೆ ಹೇಗೆ ಮಾಡುತ್ತಾನೆ. ಊರಿನ ನೈರ್ಮಲ್ಯಕರಣ ಮಾಡುವ ಕಾರ್ಯದಲ್ಲಿ ಸದಾ ಇರುವ ಇವರ ಕೆಲಸ ಶ್ಲಾಘನೀಯ. ಮುಖ್ಯವಾಗಿ ಪೌರಕಾರ್ಮಿಕರು ತಮ್ಮ ಆರೋಗ್ಯದ ಕಡೆ, ಮತ್ತು ಅವರ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕು ಎಂದು ಸಲಹೆ ನೀಡಿದರು. ಪುರಸಭೆ ಮುಖ್ಯಾಧಿಕಾರಿ ವಾಯ್ ಜಿ ಗದ್ದಿಗೌಡ್ರು ಮಾತನಾಡಿ, ಪೌರ ಕಾರ್ಮಿಕರು ಕೆಲಸ ಬಹಳ ಕಠಿಣತೆ ಆದದ್ದು. ಅವರು ಊರಿನ ಸ್ವಚ್ಚತೆಗೆ ತಾವು ಯಾವಾಗಲೂ ಕಟು ಬದ್ದವಾಗಿರುತ್ತಾರೆ. ಅವರೆಲ್ಲರಿಗೂ ಗೌರವಿಸುತ್ತಿರುವದು ನಮ್ಮ ಕರ್ತವ್ಯವಾಗಿದೆ ಎಂದು ಹೇಳಿದರು. ಬ್ಯಾಂಕುಗಳ ವ್ಯವಸ್ಥಾಪಕರು ಮಾತನಾಡಿ, ಕೇಂದ್ರ ಸರಕಾರ ಆದೇಶದಂತೆ ರಾಷ್ಟ್ರೀಕೃತ ಬ್ಯಾಂಕಗಳಲ್ಲಿ, ಪ್ರಧಾನಮಂತ್ರಿ ಜನ ಧನ ಯೋಜನೆ, ಪ್ರಧಾನಿ ಸುರಕ್ಷಾ ವಿಮಾ ಯೋಜನೆ, ಜೀವ ಜ್ಯೋತಿ ವಿಮಾ ಯೋಜನೆ ಕುರಿತು ಸರ್ವರಿಗೂ ಇದರ ಉಪಯೋಗ ಪಡಿಯಲು ತಮ್ಮ ಶಾಖೆಗಳಿಗೆ ಭೇಟಿ ನೀಡಲು ಮಾಹಿತಿ ತಿಳಿಸಿದರು. ಪುರಸಭೆ ಅಧ್ಯಕ್ಷೆ ಮೆಹಬೂಬಿ ಹ, ನವಲಗುಂದ, ರೈಮಾನಸಾಬ ಹೊರಗಿನಮನಿ, ಗಂಗಾರಮೇಶ ಕರೆಂಟ್ನರ್ವ, ಶಿವಾನಂದ ಬೆಳಹಾರ, ಶಾನು ನಾಶಿಪುಡಿ, ವಿ, ಬಣಗಾರ ಜಿಲ್ಲಾ ಪೌರಾಡಳಿತ ಅಧಿಕಾರಿಗಳು, ನಾಮ ನಿರ್ದೇಶತ ಸದಸ್ಯರಾದ, ವೀರನಾರಾಯಣ ಬೆಂತೂರ, ಹಸನ್ ಗಡ್ಡದ, ಮಾರುತಿ ಕಾಳಿ, ಖಾದರ್ ಸಾಬ ಮುಳಗುಂದ ಸೇರಿದಂತೆ ಎಲ್ಲ ಪೌರ ಕಾರ್ಮಿಕ ಬಳಗ ಉಪಸ್ಥಿತರಿದ್ದರು. ಬಾಳೋಜಿ ನಿರೂಪಿಸಿದರು.

ಶಾಲಾ ಆವರಣದಲ್ಲಿ ಗ್ರಾಮ ಪಂಚಾಯಿತಿ ಕಟ್ಟಡ!

ಮುಂಡರಗಿ ತಾಲೂಕಿನ ಡೋಣಿ ಗ್ರಾಮದಲ್ಲಿರುವ ಶತಮಾನ ಕಂಡ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ

ಮಾಳಿಂಗರಾಯ ಪೂಜಾರ

ಗದಗ: ಸರಕಾರಿ ಶಾಲಾ ಆವರಣವನ್ನು ಗ್ರಾಮ ಪಂಚಾಯತಿಯವರು ಅತಿಕ್ರಮ ಮಾಡಿಕೊಂಡು ಗ್ರಾಮ ಪಂಚಾಯತಿ ಕಟ್ಟಡ ಹಾಗೂ ಸಂತೆ ಕಟ್ಟೆ ಮಾಡಿಕೊಂಡಿದ್ದು, ಇದರಿಂದ ವಿದ್ಯಾರ್ಥಿಗಳು ಮೈದಾನ ಇಲ್ಲದೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಡೋಣಿ ಗ್ರಾಮದಲ್ಲಿರುವ ಶತಮಾನ ಕಂಡ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಡೋಣಿ ಗ್ರಾಮದ ಶಿಕ್ಷಣ ಪ್ರೇಮಿ ಶಿವಪ್ಪ ಗಾಂಜಿ ಅವರು ಸುಮಾರು 2 ಎಕರೆ 15 ಗುಂಟೆ ಭೂಮಿಯನ್ನು ದಾನ ಮಾಡಿದ್ದಾರೆ. ಇದೆ ಶಾಲೆಯನ್ನು 2018-19ನೇ ಸಾಲಿನಲ್ಲಿ ಈ ಶಾಲೆಯನ್ನು ಕರ್ನಾಟಕ ಪಬ್ಲಿಕ್ ಶಾಲೆಯಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಈ ಶಾಲೆಯಲ್ಲಿ 476 ವಿದ್ಯಾರ್ಥಿಗಳು ಇದ್ದು, 14 ಕೊಠಡಿಗಳು ಈಗಾಗಲೇ ಇವೆ. ಆದರೆ ವಿದ್ಯಾರ್ಥಿಗಳ ದಾಖಲಾತಿ ಅಧಿಕವಾಗಿರುವುದರಿಂದ ಕೊಠಡಿಯ ಕೊರತೆಯನ್ನು ಅನೇಕ ವರ್ಷಗಳಿಂದ ಎದುರಿಸುತ್ತಿತ್ತು ಪ್ರಸಕ್ತ ವರ್ಷ ನೂತನ 4 ಕೊಠಡಿ ನಿರ್ಮಾಣಕ್ಕೆ ಈಗಾಗಲೇ ಸರಕಾರದಿಂದ ಅನುದಾನ ಬಿಡುಗಡೆಯಾಗಿದ್ದು, ಅದರೆ ಕೊಠಡಿ ನಿರ್ಮಾಣಕ್ಕೆ ಜಾಗದ ಕೊರತೆ ಎದುರಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಡೋಣಿ ಶಾಲಾ ಆವರಣದಲ್ಲಿ ನಿರ್ಮಾಣ ಮಾಡಲಾದ ಗ್ರಾಮ ಪಂಚಾಯತಿ ಕಟ್ಟಡ.

ಇದಕ್ಕೆ ಕಾರಣ ಸರಕಾರಿ ಶಾಲೆಯ ಆವರಣದಲ್ಲಿ ಆವರಣದಲ್ಲಿ ಡೋಣಿ ಗ್ರಾಮ ಪಂಚಾಯತಿಯು 2012ರಲ್ಲಿ ತನ್ನ ಸ್ವಂತ ಕಟ್ಟಡ ನಿರ್ಮಾಣ ಮಾಡಿಕೊಂಡಿದ್ದು, ಅಲ್ಲದೆ ಸಂತೆ ಕಟ್ಟೆ ಸಹ ನಿರ್ಮಾಣ ಮಾಡಿದೆ ಇದರಿಂದ ಇದರಿಂದ ಶಾಲೆಗೆ ಮೈದಾನ ಇಲ್ಲದ ಬಹಳಷ್ಟು ವರ್ಷಗಳಿಂದ ಪರದಾಡುತ್ತಿದೆ.

ಸ್ಥಳೀಯ ಸಂಸ್ಥೆಯಾಗಿರುವ ಗ್ರಾಮ ಪಂಚಾಯತಿಗೆ ಶಾಲಾ ಅಭಿವೃದ್ಧಿ ಆಡಳಿತ ಮಂಡಳಿಯವರು ನಮ್ಮ ಶಾಲೆಗೆ ಜಾಗವನ್ನು ಬಿಟ್ಟು ಬಿಡಿ ಎಂದು ಪತ್ರವನ್ನು ಬರೆದಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಹ ಜಾಗ ಬಿಡುವಂತೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕೇಳಿಕೊಂಡಿದ್ದಾರೆ.

ನಂತರ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಸದಸ್ಯರು ಸಭೆ ಕರೆದು 2023 ರಲ್ಲಿ ಗ್ರಾಮ ಪಂಚಾಯತಿ ಕಟ್ಟಡವನ್ನು ಬಿಟ್ಟುಕೊಟ್ಟು ಗ್ರಾಮ ಪಂಚಾಯತಿಯ ಇನ್ನೊಂದು ಜಾಗದಲ್ಲಿ ನೂತನ ಕಟ್ಟಡ ನಿರ್ಮಾಣಕ್ಕೆ ಹಾಗೂ ಸ್ಥಳಾಂತರಕ್ಕೆ ಒಪ್ಪಿಗೆ ನೀಡಿ ಠರಾವು ಮಾಡಿದ್ದಾರೆ ಎನ್ನುವ ಮಾಹಿತಿ ಇದೆ.

ಲಕ್ಷಾಂತರ ರೂಪಾಯಿ ಖರ್ಚು ಬೇರೆ ಇಲಾಖೆಯ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಿ, ಈಗ ಕಟ್ಟಡ ಬಿಡುತ್ತಿರುವ ಅಂದರೆ ಹೇಗೆ ಎನ್ನುವ ಪ್ರಶ್ನೆ ಗ್ರಾಮಸ್ಥರಲ್ಲಿ ಮೂಡುತ್ತಿದ್ದು, ಬೇಲಿನೆ ಎದ್ದು ಹೊಲ ಮೇಯ್ದಂತೆ ಆಗಿದ್ದು, ಗ್ರಾಮ ಪಂಚಾಯತಿ ಅಥವಾ ಸ್ಥಳೀಯ ಸಂಸ್ಥೆಗಳು ಬೇರೆ ಜಾಗದಲ್ಲಿ ಕಟ್ಟಡ ನಿರ್ಮಾಣ ಅತಿಕ್ರಮ ಮಾಡಿಕೊಂಡರೆ ತೆರವುಗೊಳಿಸಲು ಮುಂದಾಗುತ್ತಾರೆ ಆದರೆ ಗ್ರಾಮ ಪಂಚಾಯತಿಯವರೇ ಶಿಕ್ಷಣ ಇಲಾಖೆಯ ಜಾಗವನ್ನು ಆಕ್ರಮಿಸಿಕೊಂಡು ಕಟ್ಟಡ, ಸಂತೆ ಕಟ್ಟೆ ಹೀಗೆ ಅನೇಕ ಚಟುವಟಿಕೆಗಳಿಗೆ ಉಪಯೋಗ ಮಾಡಿಕೊಂಡಿದ್ದಾರೆ.

ಈ ಶಾಲೆಯ ಆವರಣದಲ್ಲಿ 2012 ರಲ್ಲಿ ನೂತನ ಕಟ್ಟಡ ನಿರ್ಮಾಣ ಮಾಡಲಾಗಿದೆ ನಂತರ ಇದೆ ಆವರಣದಲ್ಲಿ ಸಂತೆ ಕಟ್ಟೆ ಸಹ ಮಾಡಲಾಗಿದೆ. ಇಷ್ಟು ವರ್ಷಗಳು ಆದರೂ ಶಾಲೆ ಆವರಣದಲ್ಲಿ ಗ್ರಾಮ ಪಂಚಾಯತಿ ಕಟ್ಟಡ ಹಾಗೂ ಸಂತೆ ಕಟ್ಟೆ ನಿರ್ಮಾಣ ಮಾಡಿದರು ಶಿಕ್ಷಣ ಇಲಾಖೆಯು ಕೇಳಿಲ್ಲ ಈಗ ನಮಗೆ ಜಾಗದ ಕೊರತೆ ಇದೆ ಗ್ರಾಮ ಪಂಚಾಯತಿಯನ್ನು ಹಾಗೂ ಸಂತೆ ಕಟ್ಟೆಯನ್ನು ಸ್ಥಳಾಂತರ ಮಾಡಲು ಶಿಕ್ಷಣ ಇಲಾಖೆ ಗ್ರಾಮ ಪಂಚಾಯತಿಗೆ ಪತ್ರ ಬರೆದಿದ್ದಾರೆ. 2023 ರಲ್ಲಿ ಪಂಚಾಯತಿ ಸ್ಥಳಾಂತರ ಮಾಡಲು ಠರಾವು ಮಾಡಲಾಗಿದೆ ಎನ್ನುವ ಮಾಹಿತಿ ಇದೆ.

ಒಟ್ಟಾರೆ ಶಾಲೆ ಮೈದಾನವನ್ನು ಆದಷ್ಟು ಬೇಗ ಗ್ರಾಮ ಪಂಚಾಯತಿ ಸ್ಥಳಾಂತರ ಮಾಡಿ, ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಣ ಇಲಾಖೆಗೆ ಅನುಕೂಲ ಮಾಡಿಕೊಡಬೇಕು ಎನ್ನುವದು ಶಿಕ್ಷಣ ಪ್ರೇಮಿಗಳ ಆಗ್ರಹವಾಗಿದೆ.

> **ಶಾಲಾ ಆವರಣದಲ್ಲಿ ಗ್ರಾಮ ಪಂಚಾಯತಿ ಕಟ್ಟಡ ಹಾಗೂ ಸಂತೆ ಕಟ್ಟೆ ನಿರ್ಮಾಣ ಮಾಡಿರುವ ಕುರಿತು ಮುಂಡರಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಡೆಯಿಂದ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು.**
> -ಜಿ.ಎಲ್. ಭಾರಟಕ್ಕೆ ಪ್ರಭಾರ ಡಿಡಿಪಿಐ ಗದಗ

> **ಶಾಲೆ ಆವರಣದಲ್ಲಿ ಪಂಚಾಯತಿ ಕಟ್ಟಡ ಹಾಗೂ ಸಂತೆ ಕಟ್ಟೆ ನಿರ್ಮಾಣ ಮಾಡಿರುವುದರಿಂದ ಮಕ್ಕಳಿಗೆ ಆಟದ ಮೈದಾನ ಕೊರತೆ ಇದೆ. ಕೂಡಲೇ ಗ್ರಾಮ ಪಂಚಾಯತಿಯವರು ಈ ಜಾಗವನ್ನು ಶಾಲೆಗೆ ಬಿಡಬೇಕು.**
> -ಶರಣು ಜಂತ್ಲಿ ಪಾಲಕರು

ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಲಿ

ಹುಬ್ಬಳ್ಳಿ: ನ್ಯಾಯಾಲಯ ನೀಡಿರುವ ತೀರ್ಪಿನ ಆಧಾರದ ಮೇಲೆ ಸಿಎಂ ಸಿದ್ದರಾಮಯ್ಯ ಅವರು ತಕ್ಷಣವೇ ರಾಜೀನಾಮೆ ನೀಡಬೇಕೆಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಒತ್ತಾಯಿಸಿದ್ದಾರ್.

ಹುಬ್ಬಳ್ಳಿಯಲ್ಲಿ ಮಾತನಾಡಿದ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಮೂಡಾ ಹಗರಣದ ಬಗ್ಗೆ ಬಿಜೆಪಿ ನಿರಂತರವಾಗಿ ಹೋರಾಟ ಮಾಡಿತ್ತು. ಈ ಮೂಲಕ ಪಕ್ಷಕ್ಕೂ ದೊಡ್ಡ ಜಯ ಸಿಕ್ಕಿದೆ. ಕಾನೂನು ಎಲ್ಲರಿಗೂ ಒಂದೇ ಎಂಬುದನ್ನ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಅರ್ಥ ಮಾಡಿಕೊಳ್ಳಬೇಕು ಎಂದರು.

ಸಿಎಂ ಸಿದ್ಧರಾಮಯ್ಯನವರು ರಾಜೀನಾಮೆ ನೀಡಿ, ತನಿಖೆಯ ನಂತರ ಅವರ ತಪ್ಪು ಇಲ್ಲದೇ ಹೋದರೇ ಮತ್ತೆ ಬೇಕಿದ್ದರೇ ಸಿಎಂ ಆಗಲಿ ಎಂದರು.

ನಾವೆಲ್ಲ ಸಿಎಂ ಜೊತೆಗಿದ್ದೇವೆ; ಸಚಿವ ಸುಧಾಕರ

ಧಾರವಾಡ: ರಾಜ್ಯಪಾಲರ ಪ್ರಾಸಿಕ್ಯೂಷನ್ ಆದೇಶವನ್ನು ಎತ್ತಿ ಹಿಡಿದು ಸಿಎಂ ಸಿದ್ದರಾಮಯ್ಯ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಮಾತನಾಡಿ, ಪ್ರಾಸಿಕ್ಯೂಷನ್‌ಗೆ ಸಂಬಂಧಿಸಿದ ಮೂಲವಾದ ತನಿಖೆಯೇ ಆಗಿಲ್ಲ.

ತನಿಖೆ ಮಾಡಲು ಅಡ್ಡಿ ಇಲ್ಲ ಎಂದು ಕೋರ್ಟ್ ಹೇಳಿರಬಹುದು. ತನಿಖೆ ಆಗದೇ ಪ್ರಾಸಿಕ್ಯೂಷನ್ ಪ್ರಶ್ನೆ ಎಲ್ಲಿಂದು ಬಂತು? ನಾವೆಲ್ಲ ಸಿಎಂ ಜೊತೆ ಇದ್ದೇವೆ. ಇದೊಂದು ಷಡ್ಯಂತ್ರ.

ಬಿಜೆಪಿ-ಜೆಡಿಎಸ್‌ನ ರಾಜಕೀಯ ಕುತಂತ್ರದ ಒಂದು ಭಾಗ ಇದು ಎಂದರು.

ಧಾರವಾಡದಲ್ಲಿ ಮಾತನಾಡಿದ ಅವರು, ನಮಗೆ ಕಾನೂನು ಹೋರಾಟಕ್ಕೆ ಸಾಕಷ್ಟು ಅವಕಾಶಗಳಿವೆ. ಇದನ್ನು ನಾವು ಕಾನೂನು ರೀತಿ ನೋಡಿಕೊಳ್ಳುತ್ತೇವೆ. ಸಿದ್ದರಾಮಯ್ಯನವರು ತಪ್ಪು ಎನ್ನಲು ಆಗುವುದಿಲ್ಲ.

ನಮಗೆ ಕಾನೂನು ಹೋರಾಟಕ್ಕೆ ಸಾಕಷ್ಟು ಅವಕಾಶಗಳಿವೆ. ಇದನ್ನು ನಾವು ಕಾನೂನು ರೀತಿ ನೋಡಿಕೊಳ್ಳುತ್ತೇವೆ. ಸಿದ್ದರಾಮಯ್ಯನವರು ತಪ್ಪು ಎನ್ನಲು ಆಗುವುದಿಲ್ಲ. ಮೊದಲು ತನಿಖೆಯಾಗಲಿ, ತನಿಖೆಯಲ್ಲಿ ತಪ್ಪು ಮಾಡಿದಾಗ ಮಾತ್ರ ಅವರು ಆರೋಪಿಯಾಗುತ್ತಾರೆ.

ಇದರ ಬಗ್ಗೆ ಸಮಗ್ರ ಮಾಹಿತಿ ನಾನು ಪಡೆದುಕೊಳ್ಳುವೆ. ನಮ್ಮ ಸರ್ಕಾರಕ್ಕೆ ಮುಜುಗರ ತರಬೇಕು ಎಂತಲೇ ಈ ರೀತಿ ಮಾಡಿದ್ದಾರೆ ಎಂದರು.

ಬಹುಮತದಿಂದ ಬಂದ ಸರಕಾರ ನಮ್ಮದು. ಅಧಿಕಾರಕ್ಕೆ ಬಂದ ತಕ್ಷಣ ನಮ್ಮ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ. ನಮ್ಮ ಸರಕಾರವನ್ನು ಬೀಳಿಸುತ್ತೇವೆ ಎನ್ನುತ್ತಿದ್ದಾರೆ. ಕುಮಾರಸ್ವಾಮಿ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡ ಮೇಲೆ ಸರಕಾರ ಬೀಳಿಸುವುದು ಜೋರಾಗಿದೆ.

ಆಗಿನಿಂದ ಕುಮಾರಸ್ವಾಮಿ ನಿದ್ರೆ ಮಾಡುತ್ತಿಲ್ಲ. ಕೇಂದ್ರದಲ್ಲಿ ಅವರು ಮಂತ್ರಿಯಾದರೂ ಅವರು ರಾಜ್ಯದಲ್ಲಿ ಅಧಿಕಾರ ಚಲಾಯಿಸುವ ಕನಸು ಕಾಣುತ್ತಿದ್ದಾರೆ. ಆ ಕನಸು ನನಸಾಗೋದಿಲ್ಲ. ಇಡೀ ದೇಶದಲ್ಲಿ ಕುತಂತ್ರದ ರಾಜಕಾರಣ ನಡೆಯುತ್ತಿದೆ. ಇದರಿಂದ ನಾವು ಧೃತಿಗೆಡುವುದಿಲ್ಲ ಎಂದರು.

ಸಿಎಂ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ

ಹುಬ್ಬಳ್ಳಿ: ರಾಜ್ಯ ರಾಜಕಾರಣದಲ್ಲಿ ಸಾಕಷ್ಟು ಸಂಚಲನ ಸೃಷ್ಟಿಸಿರುವ ಮುಡಾ ಹಗರಣದಲ್ಲಿ ಹೈಕೋರ್ಟ್ ಸಿಎಂ ಅರ್ಜಿ ವಜಾ ಮಾಡಿದ್ದು, ಈ ನಿಟ್ಟಿನಲ್ಲಿ ವಾಣಿಜ್ಯನಗರಿ ಹುಬ್ಬಳ್ಳಿಯಲ್ಲಿಯೂ ಸಿಎಂ ರಾಜಿನಾಮೆ ಕೂಗು ದಟ್ಟವಾಗಿ ಕೇಳಿ ಬಂತು. ಶಾಸಕ ಹಾಗೂ ವಿಧಾನಸಭಾ ವಿರೋಧ ಪಕ್ಷದ ಪ್ರತಿಪಕ್ಷದ ಉಪನಾಯಕ ಅರವಿಂದ ಬೆಲ್ಲದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ರಾಜೀನಾಮೆಗೆ ಆಗ್ರಹಿಸಿದರು.

ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿಯ ಮುಖಂಡರು , ಹುಬ್ಬಳ್ಳಿಯ ಕಾರವಾರ ರಸ್ತೆಯಲ್ಲಿ ಪ್ರತಿಭಟನೆ ಮಾಡಿ, ಮುಡಾ ಹಗರಣದಲ್ಲಿ ಸಿದ್ದರಾಮಯ್ಯನವರ ಅರ್ಜಿ ವಜಾ ಆಗಿದೆ. ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದರು.

ಬಡವರ ಸೈಟ್ ನುಂಗಿದ ಸಿದ್ದರಾಮಯ್ಯ ರಾಜಿನಾಮೆ ಕೊಡಬೇಕೆಂದು ಘೋಷಣೆ ಕೂಗಿದರು. ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಿರುದ್ಯೋಗ ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮ

74ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್

ಧಾರವಾಡ: ರಾಜ್ಯದಲ್ಲಿ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅನುಕೂಲ ವಾಗುವಂತೆ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸರಕಾರ ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ವಿವಿಧ ಕೌಶಲ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರು ಹೇಳಿದರು.

ಧಾರವಾಡದ ಕರ್ನಾಟಕ್ ವಿಶ್ವವಿದ್ಯಾಲಯದ ಆವರಣದಲ್ಲಿರುವ ಗಾಂಧಿಭವನದಲ್ಲಿ ಆಯೋಜಿಸಲಾದ 74ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಅವರು, ವಿವಿಧ ಕೈಗಾರಿಕೆಗಳ ನಿರೀಕ್ಷೆಗೆ ತಕ್ಕಂತೆ ವಿದ್ಯಾರ್ಥಿಗಳಿಗೆ ಕೌಶಲ್ಯಗಳನ್ನು ಕಲಿಸುವ ನಿಟ್ಟಿನಲ್ಲಿ ಸರಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು. ಉದ್ಯೋಗಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಬಿ.ಕಾಂ. ಪದವಿಯಲ್ಲಿ ಹೊಸ ನಾಲ್ಕು ವಿಭಾಗಗಳನ್ನು ತೆರಯಲಾಗಿದ್ದು, ಈಗಾಗಲೇ 1400 ವಿದ್ಯಾರ್ಥಿಗಳಿಗೆ ಪ್ರಶಿಕ್ಷಣಾರ್ಥಿ ಶಿಷ್ಯವೇತನ ನೀಡಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಡಿಜಿಟಲ್ ಲೈಬ್ರರಿ ಆರಂಭಿಸುವಂತೆ ತಿಳಿಸಿದರು. ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ವೇಳಾಪಟ್ಟಿ ತರಲಾಗುತ್ತಿದೆ. ನಿರ್ದಿಷ್ಟ ಸಮಯಕ್ಕೆ ಪರೀಕ್ಷೆ ಹಾಗೂ ಫಲಿತಾಂಶ ಪ್ರಕಟಿಸಲಾಗುವುದು. ಯಾವುದೇ ತೊಂದರೆ ಆಗದಂತೆ ಕ್ರಮ ವಹಿಸುತ್ತಿದೆಯೆಂದು ತಿಳಿಸಿದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಚೇರಮನ್ ಪ್ರೊ. ಎಸ್.ಅಯ್ಯಪ್ಪನ್ ಅವರು ಮಾತನಾಡಿ, ಕಾಯಕವೇ ಕೈಲಾಸ ತತ್ವ ಪಾಲನೆಯ ಮೂಲಕ ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತವಾದುದನ್ನು ಸಾಧಿಸಬೇಕು ಎಂದು ಹೇಳಿದರು.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಗ್ರಾಮಸ್ವರಾಜ್ಯ ಕನಸನ್ನು ನನಸಾಗಿಸುವಂತೆ ಕರೆ ನೀಡಿದ ಅವರು ಉತ್ತಮ ಶಿಕ್ಷಣ ಮತ್ತು ಜ್ಞಾನ, ಕೌಶಲ್ಯಪೂರ್ಣತೆ, ನಾವೀನ್ಯತೆ ಮತ್ತು ಸೇವಾ ಮನೋಭಾವ ಇವು ಇಂದಿನ ನಿರ್ಣಾಯಕ ಕಾಲಘಟ್ಟದ ಅವಶ್ಯಕತೆಗಳಾಗಿವೆ. ಇಂದಿನ ದಿನಗಳಲ್ಲಿ ಸದಾ ಚರ್ಚೆಯಲ್ಲಿರುವ ಹವಾಮಾನ ಬದಲಾವಣೆ, ಪರಿಸರ ಮಾಲಿನ್ಯ, ನೈಸರ್ಗಿಕ ಸಂಪನ್ಮೂಲ ಅವನತಿ, ಹಸಿವು ಮತ್ತು ಅಪೌಷ್ಠಿಕತೆ, ಸಂಭವನೀಯ ರೋಗಗಳು, ಮೈಕ್ರೋಪ್ಲಾಸ್ಟಿಕ್ಸ್, ಜನಸಂಖ್ಯಾ ಪ್ರಮಾಣ ಬದಲಾವಣೆ, ವಲಸೆ ಇತ್ಯಾದಿಗಳು ನಮ್ಮ ಭವಿಷ್ಯದ ಸವಾಲುಗಳಾಗಿವೆ ಎಂದರು.

ಪ್ರವಾಹಗಳು ಮತ್ತು ಬರಗಾಲ, ಅಕಾಲಿಕ ಮಳೆ, ಭೂಕುಸಿತಗಳು, ತಾಪಮಾನ ಏರಿಕೆ ಹೆಚ್ಚು ಕಾಣುತ್ತಿದ್ದು, ವಿವಿಧ ಜೈವಿಕ ಮತ್ತು ಅಜೈವಿಕ ಒತ್ತಡಗಳು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಮನುಷ್ಯರನ್ನು ಭಾದಿಸುತ್ತಿದ್ದು, ಬಹು ಆಯಾಮಗಳ, ನಾವೀನ್ಯಪೂರ್ಣ ವಿಧಾನಗಳು ಮತ್ತು ಪರಿಹಾರೋಪಾಯಗಳು ಇಂದಿನ ಅನಿವಾರ್ಯ ಅಗತ್ಯತೆಯಾಗಿದೆ ಎಂದರು.

ನಮ್ಮ ಕೃಷಿ ಸಮುದಾಯಗಳ ಅನ್ನದಾತರು ತಮ್ಮ ಸಮರ್ಪಣಾ ಮನೋಭಾವ ಮತ್ತು ಕಠಿಣ ಪರಿಶ್ರಮದಿಂದ ಇಡೀ ದೇಶದ ಹಸಿವನ್ನು ನೀಗಿಸುತ್ತಾ ಬಂದಿದ್ದು, ಆಹಾರ ಭದ್ರತೆಯ ಭರವಸೆ ನೀಡಿರುವುದಲ್ಲದೆ, ದೇಶವನ್ನು ಇನ್ನಷ್ಟು ಬಲಿಷ್ಠ ಹಾಗೂ ಪ್ರಕಾಶಮಾನವಾಗಿಸಿದ್ದಾರೆ. ನಮ್ಮ ದೇಶದ 65 ಕೋಟಿಗಿಂತ ಹೆಚ್ಚು ಜನರು ಕೃಷಿ ಅವಲಂಬಿಸಿದ್ದು, ನಮ್ಮ ವಾರ್ಷಿಕ ಆಹಾರ ಉತ್ಪಾದನೆಯ 332 ಮಿಲಿಯನ್ ಟನ್ ಆಹಾರಧಾನ್ಯಗಳು, 355 ಮಿಲಿಯನ್ ಟನ್ ಹಣ್ಣು ಮತ್ತು ತರಕಾರಿಗಳು, 231 ಲೀಟರ್ ಹಾಲು, 10 ಮಿಲಿಯನ್ ಟನ್ ಮಾಂಸ, 18 ಮಿಲಿಯನ್ ಟನ್ ಮೀನು ಹಾಗೂ 120 ಬಿಲಿಯನ್ ಮೊಟ್ಟೆ ಇತ್ಯಾದಿಗಳು ಸೇರಿ 1000 ಮಿಲಿಯನ್ ಟನ್‌ಗಳಷ್ಟು ಆಹಾರವಾಗುತ್ತದೆ. ಉದ್ದಿಮೆಯಾಗಲಿ, ಇಂಧನವಾಗಲಿ, ಸಂವಹನವಾಗಲಿ, ಅಂತರ್ಜಾಲ ಆಧಾರಿತ ಕೃತಕ ಬುದ್ದಿಮತ್ತೆ ಅಥವಾ ನಾವೀನ್ಯಪೂರ್ಣ ಬದಲಾವಣೆಗಳ ಯಾವುದೇ ವಲಯವಾಗಿರಲಿ, ಅಲ್ಲಿ ಮಾನವ ಪ್ರತಿಭೆ, ಉತ್ಸಾಹ ಮತ್ತು ಉದ್ಯಮಶೀಲತೆಯು ಪುನರುಜ್ಜೀವನ ಗೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ ಎಂದರು.

